ವಿತ್ತೀಯ ಕಾರ್ಯಕಲಾಪಗಳು
೧೯೮೩–೮೭ನೇ ಸಾಲಿನ
ಅನುದಾನಗಳಿಗೆ ಸಂಬಂಧಿಸಿದ ಬೇಡಿಕೆಗಳುಮಂಡನಾ ಪ್ರಸ್ತಾವಗಳು

ಅಧ್ಯಕ್ಷರು.—ಇನ್ನು ಮುಂದೆ ಬೇಡಿಕೆಗಳ ಪ್ರಸ್ತಾವನೆ. ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ತಮ್ಮ ಬೇಡಿಕೆಗಳನ್ನು ಮಂಡಿಸುತ್ತಾರೆ.

ಬೇಡಿಕೆ ಸಂಖ್ಯೆ ೪೩. ಯೋಜನಾ ಇಲಾಖೆಯ ಅಭಿಯಾಚನೆಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೩೭,೪೯ ೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ ೧೦,೦೦,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ ೪೯–ಭೂ ಕಂದಾಯ ಇತ್ಯಾದಿ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೯,೨೭.೭೮,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೧,೧೨,೮೫,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಬೇಕೆಂದಂ ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ ೫೧–ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೦೯,೦೦.೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ ೫೧ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೭೦,೦೦,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ ೫೨ ಪುನರ್ವಸತಿ ಯೋಜನೆಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೨೬.೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡ ಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರಂತ್ತೇನೆ.

ಬೇಡಿಕೆ ಸಂಖ್ಯೆ ೫೩. ಮತೀಯ ಮತ್ತು ಧರ್ಮಾದಾಯ ಸಂಸ್ಥಗಳು ಇತ್ಯಾದಿ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೭೧,೬೨,೦೦೦ ರೂಪಾಯಿಗಳಿಗಿಂತ ವಿಸ್ತಾರದ ಮೊತ್ತವನ್ನು ವಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ

†ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ (ಗುರಮಿಟ್‌ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಹಾಗೂ ಮುಜರಾಯಿ ಸಚಿವರಾದಂಥ ಶ್ರೀ ಎಸ್. ಆರ್ ಬೊಮ್ಮಾಯಿ ಅವರು ಈ ಸಭೆಯಲ್ಲಿ ಮಂಡಿಸಿರುವಂತಹ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಅಧ್ಯಕ್ಷರು.—ತಾವು ೪೫ ನಿಮಿಷಗಳಲ್ಲಿ ಮುಗಿಸಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಯತ್ನ ಮಾಡುತ್ತೇನೆ. ಈ ಬೇಡಿಕೆಗಳನ್ನು ಎಷ್ಟರ ಮಟ್ಟಿಗೆ ಒಪ್ಪಬಹುದು ಎಂಬ ಬಗ್ಗೆ ಕೆಲವು ವಿಷಯಗಳನ್ನು ಇಲ್ಲಿ ಹೇಳಲೇ ಬೇಕಾಗುತ್ತದೆ. ಇಲ್ಲಿ ಏನನ್ನೂ ಹೇಳದೆ ಇವರಂ ಇಟ್ಟಂತಹ ಎಲ್ಲ ಬೇಡಿಕೆಗಳನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ಇಲಾಖೆ ಬಹಳ ಮಹತ್ವದಿಂದ ಕೂಡಿದ ಇಲಾಖೆ ಎಂದು ನಾವೆಲ್ಲರೂ ಬಹಳ ಹಿಂದಿನಿಂದ ತಿಳಿದು ಕೊಂಡು ಬಂದಿದ್ದೆವು. ಆದರೆ ದುರ್ದೈವದಿಂದ ಇತ್ತೀಚೆಗೆ ಇದರ ಒಂದು ಮಹತ್ವ ಕಡಿಮೆಯಾಗುತ್ತಿದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸರ್ಕಾರದ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಹೆಚ್ಚಾದಾಗ ಹೊಸ ಹೊಸ ಇಲಾಖೆಗಳು ಸ್ಥಾಪನೆಗೊಂಡವು. ಈ ಕಾರಣದಿಂದ ಈ ಇಲಾಖೆಯ ಮಹತ್ವ ಕಡಿಮೆ ಆಗಿದ್ದು ಒಂದು ಭಾಗವಾದರೆ, ಮತ್ತೊಂದು ಕಡೆ ಈ ಇಲಾಖೆಯ ಕೆಲಸ ಕಾರ್ಯಗಳಿಗೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಮತ್ತು ಎಷ್ಟು ಲಕ್ಷ ಕೊಡಬೇಕಾಗಿತ್ತೋ ಅಷ್ಟು ಕೊಡದ ಕಾರಣದಿಂದ ಈ ಇಲಾಖೆಯ ಮಹತ್ವ ಕಡಿಮೆ ಆಗಿದೆ ಎಂದು ಹೇಳಬಯಸುತ್ತೇನೆ. ಈ ಇಲಾಖೆಯ ಮಹತ್ವ ಕಡಿಮೆಯಾದರೂ ಸಹ ಈ ಇಲಾಖೆಯ ಮೇಲೆ ಕೆಲಸದ ಒತ್ತಡ ಮಾತ್ರ ಜಾಸ್ತಿಯಾಗಿದೆ. ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್, ಪಂಚಾಯತ್ ರಾಜ್ ಡಿಪಾರ್ಟ್‌ಮೆಂಟ್ ಹೀಗೆ ನಾನಾ ಇಲಾಖೆಗಳ ಮತ್ತು ಬೇರೆ ಬೇರೆ ಇಲಾಖೆಗಳ ಮಂತ್ರಿಗಳ ಒಂದು ಒತ್ತಡ ಈ ರೆವಿನ್ಯೂ ಇಲಾಖೆಯ ಮೇಲಿದೆ. ಹೆಚ್ಚು ಕಡಿಮೆ ಎಲ್ಲ ಇಲಾಖೆಗಳ ಕೆಣ್ಣು ತಹಶೀಲ್‌ದಾರರ ಕಛೇರಿಯ ಮೇಲಿರುತ್ತದೆ. ತಾಲ್ಲೂಕ್ ಮಟ್ಟದಲ್ಲಿ ಯಾವುದೇ ಕೆಲಸವಾಗಬೇಕಾದರೂ ಸಹ ತಹಶೀಲ್‌ದಾರರಿಗೆ ಹೇಳಬೇಕಾಗುತ್ತದೆ. ಇದೇ ಕಾರಣದಿಂದ ಬೇರೆ ಬೇರೆ ಇಲಾಖೆಗಳ ಮಂತ್ರಿಗಳು ತಹಶೀಲ್‌ದಾರರಿಗೆ ಹೇಳಿ ಮಾಡಿಸುತ್ತೇನೆಂದು ತಮ್ಮ ಹತ್ತಿರ ಬಂದವರಿಗೆ ಹೇಳುತ್ತಾರೆ. ಇವೊತ್ತಿನ ದಿವಸ ತಹಶೀಲ್‌ದಾರ್ ಅವರಿಗೆ ಹೆಚ್ಚಿನ ಕೆಲಸಗಳನ್ನು ವಹಿಸಿಕೊಟ್ಟಿದ್ದೇವೆಯೇ ಹೊರತು, ಬೇರೆ ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿಲ್ಲ. ಅಲ್ಲಿನ ಸಿಬ್ಬಂದಿ ಸಂಖ್ಯೆಯನ್ನು ಜಾಸ್ತಿ ಮಾಡಿಲ್ಲ. ಇವೊತ್ತು ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ರಚನೆಯಾಗಲೀ, ಎಸ್.ಸಿ. ಮತ್ತು ಎಸ್.ಟಿ.ಗೆ ಸಂಬಂಧಪಟ್ಟ ಕಮೀಷನ್ ರಚನೆಯಾಗಲೀ ಮೈನಾರಿಟಿ ಕಮೀಷನ್ ರಚನೆಯಾಗಲಿ, ಈ ಆಯೋಗಗಳಿಗೆ ಬೇಕಾದಂಥ ವಿವರಗಳ ಬಗ್ಗೆ ಸರ್ವೆ ಮಾಡಲು ರೆವಿನ್ಯೂ ಇಲಾಖೆಗೆ ಹೇಳುತ್ತಾರೆ. ನನಗೆ ತಿಳಿದ ಮಟ್ಟಿಗೆ ಕ್ಯಾಟಲ್ ಸೆನ್ಸಸ್‌ನಿಂದ ಹಿಡಿದು ಅನೇಕ ಕೆಲಸಗಳನ್ನು ಈ ಇಲಾಖೆಗೆ ವಹಿಸಿದರೂ ಸಹ ಸರ್ಕಾರದವರು ಮಾತ್ರ ಈ ಇಲಾಖೆಗೆ ಹೆಚ್ಚಿನ ಪ್ರೋತ್ಸಾಹವನ್ನಾಗಲೀ ಹೆಚ್ಚಿನ ಹಣದ ಸಹಾಯವನ್ನಾಗಲೀ ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನನ್ನ ಒಂದು ಅನುಭವದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಇದರ ಜೊತೆಗೆ ನನ್ನ ಹತ್ತಿರ ಬರುವ ಜನರ ಹತ್ತಿರ ವಿಷಯಗಳನ್ನು ತಿಳಿದುಕೊಂಡು ಹೇಳುತ್ತಿದ್ದೇನೆ. ಇವೊತ್ತು ತಾಲ್ಲೂಕ್ ಮಟ್ಟದಲ್ಲಿ ಯಾವ ಮಂತ್ರಿಗಳು ಕರೆದರೂ ಸಹ ತಹಶೀಲ್‌ದಾರರು ಹೋಗ ಬೇಕಾಗುತ್ತದೆ. ಇದರ ಜೊತೆಗೆ ತೋಟಗಾರಿಕೆಯ ಮುಖ್ಯಾಧಿಕಾರಿಗಳು ವ್ಯವಸಾಯ ಇಲಾಖೆಯ

ಮುಖ್ಯಾಧಿಕಾರಿಗಳು ರೇಷ್ಮೆ ಇಲಾಖೆಯ ಮುಖ್ಯಾಧಿಕಾರಿಗಳು ಹೀಗೆ ನಾನಾ ಇಲಾಖೆಯ ಮುಖ್ಯಾಧಿಕಾರಿಗಳು ಕರೆದಾಗ ಇವರು ಹೋಗಬೇಕಾಗುತ್ತದೆ. ಮಳೆಯ ಬಗ್ಗೆ ಮಾಹಿತಿ ಬೇಕಾದರೆ ತಹಶೀಲ್ದಾರರನ್ನು ಮೊದಲು ಕೇಳುತ್ತಾರೆ. ಏಕೆಂದರೆ, ಇವರ ಇಲಾಖೆಯಲ್ಲಿ ಹಿಂದಿನ ವರ್ಷಗಳ ಮಾಹಿತಿ ಎಲ್ಲ ಸಿಗುತ್ತದೆಂಬ ಕಾರಣದಿಂದ. ಮುಖ್ಯವಾಗಿ ಮಳೆಯ ಬಗ್ಗೆ ಮಾಹಿತಿ ವ್ಯವಸಾಯ ಇಲಾಖೆಯಲ್ಲಿ ಇರಬೇಕಾಗುತ್ತದೆ. ಆದರೆ ಅವರು ಕೊಡುವ ವಿವರಕ್ಕೂ ತಹಶೀಲ್ದಾರರ ಕಛೇರಿಯವರು ಕೊಡುವ ವಿವರಕ್ಕೂ ವ್ಯತ್ಯಾಸವಿರುತ್ತದೆ. ನಾನು ಬರಗಾಲದ ಬಗ್ಗೆ ಅಧ್ಯಯನ ಮಾಡಲು ರಾಜ್ಯದ ಎಲ್ಲ ಕಡೆ ಪ್ರವಾಸ ಕೈಕೊಂಡಾಗ ಈ ಅಂಶವನ್ನು ತಿಳಿದುಕೊಂಡೆ. ಏತಕ್ಕೆ ಈ ರೀತಿ ವ್ಯತ್ಯಾಸವಾಗಿದೆ ಎಂಬುದನ್ನು ನೀವಾಗಲೀ ಬೇರೆ ಮಂತ್ರಿಗಳಾಗಲೀ ನೋಡಲು ಹೋಗುವುದಿಲ್ಲ. ನಾವು ಅನೇಕ ವರದಿಗಳನ್ನು ಮಳೆ ಆಧಾರದ ಮೇಲೆ ಮತ್ತು ಬೆಳೆ ಆಧಾರದ ಮೇಲೆ ತಯಾರು ಮಾಡಬೇಕಾಗುತ್ತದೆ. ಆದರೆ ಈ ಇಲಾಖೆಗಳವರು ಕೊಡುವ ಅಂಕಿಅಂಶಗಳಲ್ಲಿ ವ್ಯತ್ಯಾಸವಿದ್ದರೆ ಏನು ಮಾಡುವುದು ? ನಾವು ಕೇಂದ್ರ ಸರ್ಕಾರದಿಂದ ಸಹಾಯ ಪಡೆಯಲು ಮತ್ತು ಬ್ಯಾಂಕ್‌ಗಳಿಂದ ಸಹಾಯ ಪಡೆದುಕೊಳ್ಳಲು ಮಳೆ ಮತ್ತು ಬೆಳೆಯನ್ನು ಆಧಾರವಾಗಿಟ್ಟುಕೊಂಡು ಕೇಳಬೇಕಾಗುತ್ತದೆ. ಎಲ್ಲದಕ್ಕೂ ಒಂದು ಶಕ್ತಿ ಕೊಡುವಂತಹ ಅಸ್ತ್ರವಾಗಿರುವುದು ಈ ಮಳೆಯ ಲೆಕ್ಕ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ತಾಲ್ಲೂಕ್ ಪಟ್ಟಿದಲ್ಲಿ ಈ ಮಳೆಯ ಬಗ್ಗೆ ಸರಿಯಾದ ಲೆಕ್ಕವನ್ನು ಇಡುತ್ತಿಲ್ಲ. ಇನ್ನು ಮುಂದೆಯಾದರೂ ಈ ಬಗ್ಗೆ ಸರಿಯಾದ ಲೆಕ್ಕವನ್ನಿಡಬೇಕೆಂದು ನೀವು ನಿಮ್ಮ ಅಧಿಕಾರಿಗಳಿಗೆ ಹೇಳಬೇಕು ಮತ್ತು ಆಯಾ ಜಿಲ್ಲೆಯ ಇನ್-ಚಾರ್ಜ್ ಮಿನಿಸ್ಟರ್‌ಗಳಿಗೂ ಹೇಳಬೇಕು ವ್ಯವಸಾಯ ಇಲಾಖೆಯವರು ಮತ್ತು ರೆವಿನ್ಯೂ ಇಲಾಖೆಯವರು ಒಂದೇರೀತಿಯ ಅಂಕಿಅಂಶಗಳನ್ನು ಕೊಡಬೇಕೇ ಹೊರತು, ಬೇರೆ ಬೇರೆ ಅಂಕಿಅಂಶಗಳನ್ನು ಕೊಡುವುದು ಸರಿಯಲ್ಲವೆಂದು ಹೇಳುತ್ತೇನೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಭೂ ಸುಧಾರಣಾ ಕಾನೂನು ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೬೧ನೇ ಇಸವಿಯಲ್ಲಿ ಜಾರಿಗೆ ಬಂತು. ಆಗ ಈ ಒಂದು ಕಾನೂನು ಎಷ್ಟು ಪ್ರಗತಿಪರವಾಗಿ ಇರಬೇಕಾಗಿತ್ತೋ ಅಷ್ಟು ಪ್ರಗತಿಪರವಾಗಿ ಇರಲಿಲ್ಲ. ಅನಂತರ ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲಿ ಈ ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಯಿತು. ಸಾಮಾನ್ಯ ರೈತರಿಗೆ ಅದರಲ್ಲಿಯೂ ವಿಶೇಷವಾಗಿ ಟೆನೆಂಟ್ಸ್ ಸಹಾಯ ಮಾಡಬೇಕು, ಜಮೀನುದಾರರ ಹತ್ತಿರ ಇರುವಂತಹ ಹೆಚ್ಚುವರಿ ಜಮೀನನ್ನು ತೆಗೆದುಕೊಂಡು ಬಡವರಿಗೆ ಮತ್ತು ಕೂಲಿಗಾರರಿಗೆ ಹಂಚಬೇಕೆಂಬ ಧ್ಯೇಯವನ್ನು ಇಟ್ಟುಕೊಂಡು ೧೯೭೪ ರಲ್ಲಿ ಈ ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಯಿತು. ಈ ರೀತಿ ತಿದ್ದುಪಡಿ ಮಾಡಿದ ಮೇಲೆ ಟೆನೆಂಟ್ಸ್ ಕಡೆಯಿಂದ ಬಂದಂಥ ಅರ್ಜಿಗಳ ಪೈಕಿ ಶೇಕಡಾರ್ಧ ರಷ್ಟು ಅರ್ಜಿಗಳು ಇತ್ಯರ್ಥವಾಗಿವೆ. ಇದರ ಜೊತೆಗೆ ಟೆನೆಂಟ್ಸ್ ಕಡೆಯಿಂದ ಜಮೀನು ಕಳೆದುಕೊಂಡವರಿಗೆ ಕೊಡಬೇಕಾದ ಹಣ ಏನಿತ್ತು, ಇದನ್ನು ಸರ್ಕಾರವೇ ಕೊಡಬೇಕೆಂಬ ಬಗ್ಗೆ ಒಂದು ಪ್ರಪೋಸಲ್ ಇತ್ತು. ಅದನ್ನು ಈ ಸರ್ಕಾರ ಒಪ್ಪಿಕೊಂಡ ಕಾರಣದಿಂದ ಟೆನೆಂಟ್ಸ್‌ಗೆ ಒಂದು ದೊಡ್ಡ ಸಹಾಯ ಮಾಡಿದಂತೆ ಆಯಿತು. ಆದರೆ ಹೆಚ್ಚುವರಿ ಜಮೀನನ್ನು ಜಮೀನುದಾರರಿಂದ ಪಡೆದುಕೊಂಡು ಬಡವರಿಗೆ ಹಂಚುವಂತಹ ಕೆಲಸ ಕಳೆದ ಮೂರು ವರ್ಷಗಳಿಂದ ಸರಿಯಾಗಿ ನಡೆದಿಲ್ಲ. ಈ ಮಾತನ್ನು ಹೇಳಲು ನನಗೆ ಬಹಳ ದುಃಖವಾಗುತ್ತದೆ.

ನಿಮ್ಮ ಕಡೆಯ ಅನೇಕ ಮಾನ್ಯ ಸದಸ್ಯರುಗಳು, ನಿಮ್ಮ ಸರ್ಕಾರ ಇದ್ದಾಗೆ ಏನಾಗಿತ್ತು, ನಿಮ್ಮ ಸರ್ಕಾರ ಇದ್ದಾಗೆ ಏನಾಗಿತ್ತು ಎಂದು ಕೇಳುತ್ತಿರುತ್ತಾರೆ. ತಾವು ಸಹ ಇದರ ಬಗ್ಗೆ ಅನೇಕ ಸಲ ಕೇಳಿದ್ದೀರಿ. ಆದ್ದರಿಂದ ನಿಮ್ಮ ತಿಳುವಳಿಕೆಗೋಸ್ಕರ ಈ ಸರ್‌ಪ್ಲಸ್ ಡಿಟರ್‌ಮಿನ್ ಬಗ್ಗೆ ಹೇಳುತ್ತಿದ್ದೇನೆ. ಹಿಂದಿನ ಸರ್ಕಾರ ಇದರ ಬಗ್ಗೆ ಏನೂ ಮಾಡಿಲ್ಲ ಎನ್ನುತಕ್ಕ ಅಭಿಪ್ರಾಯವನ್ನು ಹೊಂದಿದ್ದರೆ, ಅದರ ವಿವರಗಳನ್ನು ಹೇಳಿ. ೧೯೮೨-೮೩ರ ವರೆಗೆ ೨,೯೬,೦೪೫ ಎಕರೆಯಷ್ಟು ಜಮೀನನ್ನು ಡಿಟರ್‌ಮಿನ್ ಮಾಡಿದ್ದೇವೆ. ಅದರಲ್ಲಿ ೧,೬೮,೩೪೧ ಎಕರೆಯಷ್ಟು ಜಮೀನನ್ನು ಹಂಚಿದ್ದು. ಅದರಲ್ಲಿ ಶೆಡ್ಯೂಲ್‌ಕಾಸ್ಟ್ ಜನರಿಗೆ ಕೊಟ್ಟಿರುವುದು ೫೬,೪೮೦ ಎಕರೆಯಷ್ಟು. ಟ್ರೈಬ್ ಜನರಿಗೆ ಕೊಟ್ಟಿರುವುದು ೨,೪೫೫ ಎಕರೆಯಷ್ಟು. ಇಷ್ಟು ಜಮೀನನ್ನು ೧೯೮೨-೮೩ರವರೆಗೆ ನಾವು ಹಂಚಿದ್ದೇವೆ ಎಂದು ಅಂಕಿ ಅಂಶಗಳು ಹೇಳುತ್ತವೆ. ತದನಂತರ ತಮ್ಮ ಸರ್ಕಾರ ಬಂತು. ನಿಮ್ಮ ಸರ್ಕಾರ ಬಂದ ಮೇಲೆ ಎಷ್ಟು ಜಮೀನನ್ನು ಹೊಂದಿದ್ದೀರಿ? ಎಷ್ಟು ಜಮೀನನ್ನು ಡಿಟರ್‌ಮಿನ್ ಮಾಡಿದ್ದೀರಿ? ನೀವು ಪೊಸಿಷನ್‌ಗೆ ತೆಗೆದುಕೊಂಡಿರುವ ಜಮೀನು ಎಷ್ಟು ಎಂದರೆ ಕೇವಲ ೧,೫೦,೦೨೧ ಎಕರೆ ಮಾತ್ರ. ಈ

ಜಮೀನನ್ನು ಪೊಸಿಷನ್‌ಗೆ ತೆಗೆದುಕೊಳ್ಳುವಾಗ ನೀವು ಈ ಖಾತೆಯ ಮಂತ್ರಿಗಳಾಗಿರಲಿಲ್ಲ. ಆಗ ಶ್ರೀಮಾನ್ ವಸಂತರಾವ್ ಪಾಟೀಲರು ಮಂತ್ರಿಯಾಗಿದ್ದರು. ಇದುವರೆಗೆ ನೀವು ವಶಪಡಿಸಿಕೊಂಡ ಜಮೀನಿನಲ್ಲಿ ೨೦೦೦ ಎಕರೆಯಷ್ಟು ಮಾತ್ರ ಹಂಚಿದ್ದೀರಿ. ಇಡೀ ಒಂದು ವರ್ಷದಲ್ಲಿ ಕೇವಲ ೨೦೦೦ ಎಕರೆಯಷ್ಟು ಜಮೀನನ್ನು ಮಾತ್ರ ಹಂಚುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗಿದೆ. ನಮ್ಮ ಸರ್ಕಾರ ಇದ್ದಾಗ ಜಮೀನುಗಳನ್ನು ಬಹಳಷ್ಟು ವಶಪಡಿಸಿಕೊಂಡು, ಬಡವರಿಗೆ ಹಂಚಿದ್ದೇವೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ೩ ವರ್ಷ ಆಯಿತು ಈ ೩ ವರ್ಷದಲ್ಲಿ ನೀವು ಏನೇನೂ ಸಾಧನೆಯನ್ನು ಮಾಡಿಲ್ಲ ಎಂದು ಈ ನಿಮ್ಮ ಕಾರ್ಯ ನೀತಿಯಲ್ಲಿ ಗೊತ್ತಾಗುತ್ತದೆ. ನಿಮಗೆ ಬಡವರ ಬಗ್ಗೆ ಕಳಕಳಿ ಇಲ್ಲ. ನೀವು ೩ ವರ್ಷದಲ್ಲಿ ಮಾಡಿರುವಂತಹ ಸಾಧನೆಯನ್ನು ನಾವು ಒಂದೇ ವರ್ಷದಲ್ಲಿ ಮಾಡಿರುವುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇದನ್ನು ನೋಡಿದರೆ ನಿಮ್ಮ ಸರ್ಕಾರ ಎಷ್ಟು ಮಂದಗತಿಯಿಂದ ಕೆಲಸ ಮಾಡುತ್ತಿದೆ ಎಂದು ಗೊತ್ತಾಗುತ್ತದೆ, ಇವತ್ತು ಡಿಟರ್‌ಮಿನ್ ಮಾಡಿರತಕ್ಕಂತಾದ್ದು ೩ ಲಕ್ಷ ಎಕರೆಯಷ್ಟು ಇದ್ದರೂ ಕೂಡ ಇದುವರೆಗೆ ಸ್ವಾಧೀನ ಮಾಡಿಕೊಂಡಿರುವುದು ಬಹಳ ಕಡಿಮೆ, ಆದ್ದರಿಂದ ಈ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕಾರ್ಯಕ್ರಮವನ್ನು ಚುರುಕುಗೊಳಿಸಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಚಿಂತನೆ ಮಾಡಬೇಕಾಗುತ್ತದೆ, ಕೇವಲ ಕಡಿಮೆ ಜಮೀನನ್ನು ಕೊಟ್ಟಿದ್ದೇವೆಂದು ಹೇಳಿದರೆ ಅದು ಸರಿಯಲ್ಲ. ನಮ್ಮ ಸರ್ಕಾರ ಬಹಳ ಎಫಿಶಿಯಂಟ್ ಇದೆ ಎಂದು ನೀವು ಹೇಳಬಾರದು. ಆದರೆ ನಿಮ್ಮ ಸರ್ಕಾರದ ಸಾಧನೆಯನ್ನು ನೋಡಿದರೆ ಇನ್ನೂ ಎಫಿಶಿಯಂಟ್‌ಗೆ ಬಂದಿಲ್ಲವೆಂದು ಗೊತ್ತಾಗುತ್ತದೆ. ಇನ್ನು ಎರಡನೆಯದಾಗಿ ಹೇಳಬೇಕಾದರೆ, ಮಾನ್ಯ ಅಧ್ಯಕ್ಷರೇ. ಈ ನಿಮ್ಮ ಅಂಕಿ ಅಂಶಗಳ ಪ್ರಕಾರ ಇವತ್ತಿನ ದಿವಸ ಏನು ಕಾಂಪನ್‌ಸೇಷನ್ ಅಮೌಂಟ್ ಇದೆ, ಅದರಲ್ಲೂ ತಮ್ಮ ಅಲಾಟ್‌ಮೆಂಟ್ ಎನು ಇದೆ, ಎಷ್ಟು ಹಣವನ್ನು ಕೊಡಬೇಕೆಂದು ನೀವು ನಿಗದಿ ಮಾಡಿದ್ದೀರಿ, ಆದರಿಂದಲೂ ಹಣ ಖರ್ಚಾಗದೆ ಇವತ್ತು ಹೆಚ್ಚಿನ ಹಣ ಉಳಿದಿದೆ ಎನ್ನತಕ್ಕ ವಿಷಯ ಈ ವರದಿಯಲ್ಲಿ ಬಂದಿದೆ. ಏಕೆ ಹೀಗಾಗುತ್ತದೆ? ಈ ಹಣವನ್ನು ಖರ್ಚು ಮಾಡುವ ಬಗ್ಗೆ ಅಧಿಕಾರಿಗಳು ಸರಿಯಾದ ಆಸಕ್ತಿ ವಹಿಸುತ್ತಿಲ್ಲವೇನೋ ಎಂದು ಸಂಶಯ ಬರುತ್ತಿದೆ ನೀವು ಸರಿಯಾದ ರೀತಿಯಲ್ಲಿ ಹಣ ಖರ್ಚು ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ಒಂದು ಟಾರ್ಗೆಟ್ ಫಿಕ್ಸ್ ಮಾಡಿ ಎಲ್ಲಾ ಅಧಿಕಾರಿಗಳಿಗೂ ಈ ಟಾರ್ಗೆಟ್ ರೀತಿ ನೀವು ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಖರ್ಚು ಮಾಡಬೇಕೆಂದು ಹೇಳಬೇಕು. ನಿಗದಿಯಾದ ಸಮಯಕ್ಕೆ ಕೆಲಸಗಳನ್ನು ಮುಗಿಸಲಿಕ್ಕೆ ತಾವು ದಯಮಾಡಿ ಹೇಳಬೇಕು. ಇಲ್ಲದಿದ್ದರೆ ಹಣ ಎಲ್ಲಾ ಲ್ಯಾಪ್ಸ್ ಆಗುತ್ತದೆ. ಕೆಲಸಗಳನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಗಮನ ಕೊಡದೇ ಹೋದರೆ ಹೇಗೆ? ಇವತ್ತಿನ ದಿವಸಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅಧಿಕಾರಿಗಳು ಸರಿಯಾಗಿ ಮಾಡುತ್ತಲೇ ಇಲ್ಲ. ತಾವು ಇದರ ಕಡೆ ಗಮನ ಕೊಟ್ಟು ಕೆಲಸಗಳನ್ನು ತ್ವರಿತವಾಗಿ ಆಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತು ಇನ್ನೂ ಒಂದು ವಿಷಯದ ಬಗ್ಗೆ ಹೇಳುವುದೇನೆಂದರೆ, ತಾವು ಏನು ಮಾಡಿದ್ದೀರಿ ಎಂದರೆ ಈಗ ಸುಮಾರು ೬೧ ಸಾವಿರ ಗೇಣಿದಾರರ ಕೇಸ್‌ಗಳು ಹೈಕೋರ್ಟಿನಲ್ಲಿ ಇವೆ. ಇದರಲ್ಲಿ ೩೧ ಸಾವಿರ ರಿಟ್ ಪಿಟೀಷನ್ ಮಾತ್ರ ಡಿಸ್‌ಪೋಸ್ ಆಗಿವೆ. ಇನ್ನೂ ೩೦ ಸಾವಿರ ಕೇಸ್‌ಗಳು ಪೆಂಡಿಂಗ್ ಇವೆ. ಇತ್ತೀಚೆಗೆ ಒಂದು ಅಮೆಂಡ್‌ಮೆಂಟನ್ನು ಮಾಡಿ ಉಳಿದಿರುವ ಕೇಸ್‌ಗಳನ್ನು ಮತ್ತೆ ಟ್ರಿಬ್ಯೂನಲ್‌ಗಳಿಗೆ ಬರಬೇಕೆಂದು ಮಾಡಿದ್ದೀರಿ. ಇದರ ಬಗ್ಗೆ ನಾನು ಹಿಂದೆಯೇ ಮಾತನಾಡಿದ್ದೇನೆ. ಇದು ಒಂದು ದೊಡ್ಡ ಅನಾಹುತವಾಗಿದೆ. ಎನ್ನುವ ಅಭಿಪ್ರಾಯವನ್ನು ನಾವು ಸೂಚನೆ ಮಾಡಬೇಕಾಗಿದೆ. ಅಂದಿನ ಮುಖ್ಯ ಮಂತ್ರಿಯವರು ಇದರ ಬಗ್ಗೆ ಒಂದು ನಿರ್ಣಯವನ್ನು ಮಾಡಿದ್ದರು ಅವರ ಮಂತ್ರಿಮಂಡಲದಲ್ಲಿರುವ ಅನೇಕ ಜನ ಮಾನ್ಯ ಸದಸ್ಯರು ಈಗಲೂ ಸದನದಲ್ಲಿ ಇದ್ದಾರೆ. ಅವರು ಒಳ್ಳೆಯ ಕೆಲಸವನ್ನು ಟೆನೆಂಟ್‌ಗಳ ಪರವಾಗಿ ಮಾಡಿದ್ದರು. ಆದರೆ ಈಗೀಗ ಟೆನೆಂಟ್‌ಗಳಿಗೆ ಬಹಳ ಹೆರಾಸ್‌ಮೆಂಟ್ ಆಗುತ್ತಿದೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಟೆನೆಂಟ್‌ಗಳಿಗೆ ಹೆರಾಸ್‌ಮೆಂಟ್ ಆಗಲಿ ಎನ್ನುವ ಉದ್ದೇಶದಿಂದ ಈ ನಿರ್ಣಯವನ್ನು ಮೊದಲಿನ ಸರ್ಕಾರ ಆದನ್ನು ಮಾಡಿರಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ. ಈಗ ಆಗುತ್ತಿರುವ ಟೆನೆಂಟ್‌ಗಳ ತೊಂದರೆಯನ್ನು ತಪ್ಪಿಸುವುದಕ್ಕೆ ಏನಾದರೂ ಒಂದು ತರಿತ್ವಕ್ರಮವನ್ನು ಕೈಗೊಳ್ಳಬೇಕು. ಈಗ ಹೈಕೋರ್ಟಿನಲ್ಲಿ ಪೆಂಡಿಂಗ್ ಇರುವ ಕೇಸಸ್‌ಗಳನ್ನು ಮತ್ತೆ ಟ್ರಿಬ್ಯೂನಲ್‌ಗೆ ಹಾಕುವುದಕ್ಕೆ ಒಂದು ನಿರ್ಣಯವನ್ನು ಮಾಡಿದ್ದೀರಿ. ಅದು ಎಷ್ಟು ಪರಿಣಾಮ ಬೀರುತ್ತದೋ ನೋಡಬೇಕು ಇದನ್ನು ಏಕೆ ಹೇಳುತ್ತೇನೆಂದರೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಒಂದು ಸಾರಿ ನಿರ್ಣಯವಾದ ಮೇಲೆ ಪುನಃ ಅದು ಅಪಿಲೇಟ್ ಟ್ರಿಬ್ಯೂನಲ್‌ಗೆ ಬರುತ್ತದೆ. ಅಮೇಲೆ ಮತ್ತೆ ಸಮಸ್ಯೆಗಳು ಉದ್ಭವವಾದರೆ ಪುನಃ

ಹೈಕೋರ್ಟಿಗೆ ಬರಬೇಕಾಗುತ್ತದೆ. ಹೀಗೆ ಹಳ್ಳಿಯಿಂದ ತಾಲ್ಲೂಕಿಗೆ, ತಾಲ್ಲೂಕಿನಿಂದ ಜಿಲ್ಲೆಗೆ ಟೆನೆಂಟ್‌ಗಳು ಅಲೆಯುತ್ತಿದ್ದರೆ ಅವರ ಸಮಸ್ಯೆಗಳು ಬಗೆಹರಿಯುವುದಕ್ಕೆ ತುಂಬಾ ಸಮಯ ಬೇಕಾಗುತ್ತದೆ, ಜಮೀನಿನ ಮಾಲಕ ಶ್ರೀಮಂತನಾಗಿ ಗೇಣಿದಾರ ಬಡವನಾಗಿದ್ದರಂತೂ ಗೇಣಿದಾರನಿಗೆ ಬಹಳ ಕಷ್ಟವಾಗುತ್ತದೆ. ಗೇಣಿದಾರನೂ ಶ್ರೀಮಂತನಾಗಿದ್ದರೆ ಪರವಾಗಿಲ್ಲ. ಕೆಲವು ಬಡ ಗೇಣಿದಾರರು ಲೀಗಲ್ ಏಡ್ ನವರ ಸಹಾಯವನ್ನು ತೆಗೆದುಕೊಂಡಿದ್ದಾರೆ. ಈ ಲೀಗಲ್ ಏಡ್‌ನವರು ೨೭೮ ಕೇಸ್‌ಗಳನ್ನು ಇದುವರೆಗೆ ವಿಲೇವಾರಿ ಮಾಡಿದ್ದಾರೆ ಇವತ್ತು ಒಟ್ಟು ೮ ಲಕ್ಷ ಅರ್ಜಿದಾರರು ಏನಿದ್ದಾರೆ, ಅದರಲ್ಲಿ ಸುಮಾರು ೪ ಲಕ್ಷದ ೮೫ ಸಾವಿರದ ೩೫ ಅಪ್ಲಿಕೇಷನ್‌ಗಳನ್ನು ಡಿಸೈಡ್ ಮಾಡಲಾಗಿದೆ. ಅದು ಬಹಳ ಕಡಿಮೆಯಾಗಿದೆ ಬಹಳಷ್ಟು ಅರ್ಜಿಗಳು ರಿಜಕ್ಟ್ ಆಗಿವೆ.

೩-೦೦ ಪಿ. ಎಂ.

ಅವರು ಇಷ್ಟು ಜನ ಬರದಿದ್ದರೂ ಕೂಡಾ ಸುಮಾರು ೨೫ ಪರ್ಸೆಂಟ್ ಜನ ಬರುತ್ತಾರೆ ಎಂದರೂ ಕೂಡಾ ೧,೨೫,೦೦೦ ಜನ ಆಗುತ್ತಾರೆ. ಆಗ ಇಷ್ಟು ಜನರಿಗಾದರೂ ತೊಂದರೆಯಾಗುತ್ತದಲ್ಲ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಿದ್ದುಪಡಿಯನ್ನು ತಂದುದು ಹೈಕೋರ್ಟಿನವರ ಒಂದು ಸೂಚನೆಯ ಪ್ರಕಾರ. ಅವರು ತಮ್ಮ ಜಡ್ಜ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಅನೇಕ ಸಲ ಈ ಲ್ಯಾಂಡ್ ಟ್ರಿಬ್ಯುನಲ್ ನಿರ್ಣಯಗಳಿಂದಾಗಿ ಹೈಕೋರ್ಟಿಗೆ ರಿಟ್‌ಗಳು ಬರುತ್ತವೆ. ಹೈಕೋರ್ಟ್‌ಗೆ ಬಂದ ರಿಟ್‌ಗಳ ವಿಚಾರದಲ್ಲಿ ಅಂತಿಮವಾದ ನಿರ್ಣಯವನ್ನು ಕೊಡಲಿಕ್ಕೆ ಅಧಿಕಾರವಿಲ್ಲ. ಅದನ್ನು ಟ್ರಿಬ್ಯುನಲ್‌ಗೆ ರಿಮಾಂಡ್ ಮಾಡಬೇಕಾಗುತ್ತದೆ. ಪುನಃ ಒಂದೊಂದು ಕೇಸು ೪-೫ ಸಲ ಟ್ರಿಬ್ಯುನಲ್‌ಗೆ ರಿಮಾಂಡ್ ಆದ ಒಂದು ತಿಳುವಳಿಕೆಯ ಮೇಲೆ, ಹೈಕೋರ್ಟಿನವರು ಸರಕಾರದವರು ಇದಕ್ಕೆ ತಿದ್ದುಪಡಿ ಮಾಡಬೇಕೆನ್ನುವ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಆ ಸೂಚನೆಯ ಆಧಾರದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಮತ್ತೆ ಇದರಲ್ಲಿ ಈಗ ಉಳಿದಿರತಕ್ಕಂತಹ ೩೦ ಸಾವಿರ ಅರ್ಜಿಗಳು ಏನಿದ್ದಾವೆ, ಅದರಲ್ಲಿ ೩೦,೦೦೦ ಅರ್ಜಿಗಳನ್ನು ಈಗಾಗಲೇ ರಿಮಾಂಡ್‌ಗೆ ಟ್ರಿಬ್ಯುನಲ್‌ಗಳಿಗೆ ಕಳುಹಿಸಿದ್ದಾರೆ. ಉಳಿದ ೫೦,೦೦೦ ಅರ್ಜಿಗಳು ಅಪಿಲೇಟ್ ಟ್ರಿಬ್ಯುನಲ್‌ಗೆ ಹೋಗುತ್ತವೆ. ಅದು ಹೆಚ್ಚಿಗೆ ಆಗತಕ್ಕಂಥಾದ್ದು ಇಲ್ಲ, ೩೦ ೦೦೦ ಅರ್ಜಿಗಳು ಟ್ರಿಬ್ಯುನಲ್‌ಗೆ ಹೋಗಿದ್ದಾವೆ, ಅವುಗಳ ನಿರ್ಣಯವಾಗಿ ಬರುತ್ತವೆ. ಆದುದರಿಂದ ಇಂತಹ ಕೇಸ್‌ಗಳ ಸಂಖ್ಯೆ ಹೆಚ್ಚಿಗೆ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದರೆ ಇನ್ನೂ ಕೆಲವು ಡಿಸ್ಪೋಸ್ ಆಗತಕ್ಕಂಥಾದ್ದು ಬರಬಹುದು. ಅಂದರೆ ಇದರ ಹಿಂದೆ, ಯಾವ ಒಂದು ಹಿನ್ನೆಲೆಯಲ್ಲಿ ಈ ನಿರ್ಣಯವನ್ನು ಅಂದು ತೆಗೆದುಕೊಂಡಿತ್ತು ಅನ್ನುವುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಹೈಕೋರ್ಟಿನವರು ನಿಮಗೆ ಗೈಡ್ ಲೈನ್ಸ್‌ಗಳನ್ನು ಕೊಟ್ಟಿದ್ದಾರೆ, ಈ ತರಹ ಮಾಡಿ ಎಂದು ಸೂಚನೆ ಕೊಟ್ಟಿದ್ದಾರೆ. ಆದುದರಿಂದ ಇದನ್ನು ಮಾಡಲೇ ಬೇಕಾಗಿರಲಿಲ್ಲ, ಮಾಡಬೇಕೆನ್ನುವುದು ಕೂಡಾ ಕಡ್ಡಾಯ ಇರಲಿಲ್ಲ. ನೀವು ಮಾಡದಿದ್ದಲ್ಲಿ ಅದು ಇಲ್ಲೀಗಲ್ ಆಗುತ್ತಿರಲಿಲ್ಲ. ನೀವು ಈಗ ಅವರು ಹೇಳಿದ್ದಾರೆ ಎಂದು ಒಂದು ಸ್ಟೆಪ್ಪನ್ನು ತೆಗೆದುಕೊಂಡಿದ್ದೀರಿ. ಇದರಿಂದ ತೊಂದರೆ ಕೂಡ ಆಗುತ್ತದೆ ಎನ್ನತಕ್ಕಂಥಾದ್ದು ಇದೆ ಡಿಸ್ಪ್ಯೂಟ್ ಅಪಲೇಟ್ ಟ್ರಿಬ್ಯುನಲ್‌ನಲ್ಲಿ ಒಂದು ಸಲ ನಿರ್ಣಯ ಆದ ಮೇಲೆ ಪುನಃ ಹೈಕೋರ್ಟ್‌ಗೆ ಬರುವುದಿಲ್ಲ ಎನ್ನುವುದರ ಬಗ್ಗೆ ಏನು ಖಾತರಿ ಇದೆ? ಆವಾಗ ರಿವಿಜನ್ ಪಿಟಿಷನ್‌ಗೆ ಬರುತ್ತಾರೆ. ಯಾವ ರೀತಿಯಿಂದಲಾದರೂ ಕೂಡ ಇನ್ನೊಂದು ಸಲ ಲ್ಯಾಂಡ್ ಲಾರ್ಡ್ಸ್‌ಗಳಿಗೆ ಅಪರ್ಚುನಿಟಿ ಸಿಗುತ್ತದೆ ಎಂದು ನಾನು ಹೇಳುತ್ತಿರುವುದು. ಅದಕ್ಕಾಗಿ ಈ ತೊಂದರೆ ಪುನಃ ಟೆನೆಂಟ್‌ಗಳಿಗೆ ಆಗಬಾರದು, ಅದಕ್ಕಾಗಿ ತಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇದು ನಿಮ್ಮ ಎಕ್ಸ್‌ಪಿರಿಮೆಂಟ್ ಇದೆ. ಇದನ್ನು ನಾವು ಈಗ ವಿರೋಧ ಮಾಡಿದರೂ ಕೂಡ ತಾವು ಇದರ ಬಗ್ಗೆ ಕನ್ವಿನ್ಸ್ ಆಗಲಿಲ್ಲ. ಕೊನೆಗೆ ನಿಮ್ಮ ಪಾಡಿಗೆ ನೀವು ಹೊರಟಿದ್ದೀರಿ. ಇದರಿಂದಾಗಿ ಹೆರಾಸ್‌ಮೆಂಟ್ ಆಗುತ್ತದೆ ಎನ್ನುವುದನ್ನು ನಾನು ಖಚಿತವಾಗಿ ಹೇಳುತ್ತೇನೆ. ಹಾಗೆಯೇ ತಮ್ಮ ಸರಕಾರ ಬಂದ ಮೇಲೆ, ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಎಷ್ಟು ಭೂಮಿಯನ್ನು ಹಂಚಿದ್ದೀರಿ ಎನ್ನುವುದು ಬೇಕು. ತದನಂತರ ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಎಷ್ಟರ ಮಟ್ಟಿಗೆ ಬಡವರಿಗೆ ಸಹಾಯ ಮಾಡಿದ್ದೀರಿ ಎನ್ನುವುದನ್ನು ಇವೊತ್ತು ನಾನು ಹೇಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಹೆಚ್ಚಿನ ಸಹಾಯ ಆಗಬೇಕೆಂದು ಹೇಳಿ, ನಾನು ಮಂತ್ರಿಯಾಗಿದ್ದಾಗ ಒಂದು ಸರಕಾರಿ ಆಜ್ಞೆಯನ್ನು ಹೊರಡಿಸಿದ್ದೆನು. ಅದು ಸುಮಾರು

೧೯೮೧ರ ಮಾರ್ಚ್ ತಿಂಗಳ ಸರ್ಕಾರಿ ಆಜ್ಞೆ ಇರಬಹುದು. ಬಹುಶಃ ಅದರ ದಿನಾಂಕ, ೨೭-೩-೧೯೮೧ ಇರಬೇಕು ಎಂದು ಕಾಣುತ್ತದೆ, ಇದಕ್ಕಾಗಿ ಏಕೆ ಸರ್ಕಾರಿ ಆಜ್ಞೆಯನ್ನು ತಂದುದು ಎಂಬುದನ್ನು ಹೇಳುತ್ತೇನೆ. ನಾನು ಮಾನ್ಯ ಕಡಿದಾಳ್ ಮಂಜಪ್ಪನವರ ಕಾಲದಿಂದ, ಮಾನ್ಯ ಬಸವಲಿಂಗಪ್ಪನವರ ಕಾಲದವರೆಗೂ ವಿಷಯವನ್ನು ಸಂಪೂರ್ಣವಾಗಿ ರಿವ್ಯೂ ಮಾಡಿದೆ. ಈ ದೇಶದಲ್ಲಿರತಕ್ಕಂತಹ ಜಮೀನನನ್ನು ಅದರಲ್ಲಿಯೂ ಸರ್ಕಾರಿ ಜಮೀನನ್ನು ಬಡವರಿಗೆ ಎಷ್ಟು ಸಿಕ್ಕಿದೆ. ಅದರಲ್ಲಿ ವಿಶೇಷವಾಗಿ ಈ ನಿರ್ಗತಿಕರಿಗೆ, ಎಸ್.ಸಿ., ಎಸ್.ಟಿ.ಯವರಿಗೆ ಎಷ್ಟು ಸಿಕ್ಕಿದೆ, ಎನ್ನುವುದನ್ನು ಕೂಡ ನಾನು ಲೆಕ್ಕ ಹಾಕಿದೆ. ಆ ಲೆಕ್ಕದ ಆಧಾರದ ಮೇಲೆ ನೋಡಿದರೆ, ಅಂಕಿ ಅಂಶಗಳನ್ನು ನೋಡಿದರೆ, ಅವರಿಗೆ ಕೇವಲ ೫-೬ ಪರ್ಸೆಂಟ್‌ನಷ್ಟು ಕೂಡ ಸಿಕ್ಕಿರಲಿಲ್ಲ. ಸಾಮಿರಾರು ಎಕರೆ ಜಮೀನನ್ನು ಯಾರ್‍ಯಾರು ಇದ್ದವರು ಇದ್ದಾರೋ ಅವರೇ ಎನ್‌ಕ್ರೋಚ್ ಮಾಡಿ ರೆಗ್ಯುಲರೈಸ್ ಮಾಡಿಕೊಂಡರು. ಅದಕ್ಕಾಗಿ ಈ ವರ್ಗದವರು ಒಂದೇ ವರ್ಷ ಕಲ್ಟಿವೇಟ್ ಮಾಡಿದ್ದರೂ ಕೂಡ, ಅವರಿಗೆ ರೆಗ್ಯುಲರೈಸ್ ಮಾಡಬೇಕೆಂದು ನಾವು ಒಂದು ಕಾನೂನನ್ನು ಮಾಡಿದ್ದೆವು. ಇದನ್ನು ತಮ್ಮ ಅವಗಾಹನೆಗೆ ಏತಕ್ಕೆ ತರುತ್ತಿದ್ದೇನೆ ಅಂದರೆ ತಾವು ಕೂಡ ಕೇರ್‌ಫುಲ್ ಆಗಿ ಈ ವಿಚಾರವನ್ನು ನೋಡಬೇಕು. ಒಂದೇ ವರ್ಷದಲ್ಲಿ ನಾವು ಈ ಪೂರ್ ಸೆಕ್ಷನ್‌ನವರಿಗೆ, ಬಡವರಿಗೆ,ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ೫೯,೦೦೦ ಎಕರೆ ಅಲ್ಲದೇನೆ, ಲ್ಯಾಂಡ್ ಗ್ರ್ಯಾಂಟ್ಸ್‌ನಲ್ಲಿ ೩೨,೭೦೮. ಎಕರೆಯಷ್ಟು ೧೯೭೭ರ ಸರ್ಕಾರಿ ಆಜ್ಞೆಯ ಪ್ರಕಾರ, ೧೬,೦೦೦ ಎಕರೆಯನ್ನು ೧೯೮೧ರ ಆಜ್ಞೆಯ ಪ್ರಕಾರ, ಸುಮಾರು ೮೨,೦೦೦ ಎಕರೆಯನ್ನು, ಮತ್ತು ಎಸ್.ಟಿ ಎಸ್.ಸಿ. ಗಳಿಗೆ Prohibition of Transfer Alienation Act. ಅದರ ಕೆಳಗೆ ಸುಮಾರು ೧೭,೦೦೦ ಎಕರೆಯನ್ನು ಕೊಟ್ಟಿದ್ದೇವೆ. ಹೀಗೆ ಸುಮಾರು ೨,೨೧,೯೦೨ ಎಕರೆಗಳು, ಇದು ಕೇವಲ ಎಸ್.ಸಿ., ಎಸ್.ಟಿ, ಯವರಿಗೆ ವಿತರಣೆ ಮಾಡಿದಂತಾದ್ದು ಆಗಿದೆ. ಆ ಒಂದು ಸಮಯದಲ್ಲಿ ಆದ ತದ ನಂತರ ಒಂದು ದೊಡ್ಡ ಅನಾಹುತ ಏನು ಆಯಿತು ಅಂದರೆ, ೧೯೭೭ರ ಸರಕಾರಿ ಆಜ್ಞೆ ಏನು ಇದೆ, ಆ ಆಜ್ಞೆಯನ್ನು ಕೆಲವರು ದುರುಪಯೋಗ ಪಡೆದುಕೊಳ್ಳುತ್ತಾರೆ, ಎಲ್ಲಾ ಶ್ರೀಮಂತರು ಇದರ ಲಾಭವನ್ನು ತೆಗೆದು ಕೊಳ್ಳುತ್ತಾರೆ. ಎಂದು ತಿಳಿದು ಬಂದಂ ಅದನ್ನು ನಿಲ್ಲಿಸಿಬಿಟ್ಟಿದ್ದೆನಂ, ಆದರೆ ಇವರು ಮಾಡಿದ್ದು ಏನೆಂದರೆ, ಅದರಲ್ಲಿ ಹೆಚ್ಚಿನ ಜಮೀನನ್ನು ರೆಗ್ಯುಲರೈಸ್ ಮಾಡಿಬಿಟ್ಟರು ಉದಾಹರಣೆಗೆ ಹೇಳುವುದಾದರೆ, ೧೯-೧೯೭೭ರ ಜಿ.ಓ. ಪ್ರಕಾರ, ಅದರಲ್ಲಿ ಏನೂ ಕಂಡೀಷನ್ ಇಲ್ಲ. ಯಾರೇ ಆಗಲಿ ಸಂಪೂರ್ಣ ಮೂರೂ ವರ್ಷ ಜಮೀನನ್ನು ಅನ್ ಆಥರೈಸ್ ಆಗಿ ಕಲ್ಟಿವೇಟ್ ಮಾಡಿದರೆ ಅವರಿಗೆ ರೆಗ್ಯುಲರೈಸ್ ಮಾಡಬೇಕು ಎಂದಿದೆ. ಆದರೆ ಒಂದು ಕಂಡೀಷನ್ ಹಾಕಿದ್ದಾರೆ, ಇಷ್ಟು ಇರಬೇಕು ಎಂದು ಇದೆ. ತಮಗೆ ಗೊತ್ತಿದೆ ಹೆಚ್ಚು ಕಡಿಮೆ ಎಲ್ಲರೂ ಫಾಲ್ಸ್ ಸರ್ಟಿಫಿಕೇಟ್‌ಗಳನ್ನು ಕೊಡುತ್ತಾರೆ. ಅಥವಾ ನಮಗೆ ಇರತಕ್ಕಂಥಾದ್ದು ೧೦ ಎಕರೆ ಜಮೀನು ಎಂದು ತೋರಿಸಿ, ಆ ತರಹದ ಸ್ಲಿಪ್ ಮಾಡಿಕೊಂಡು ಇಪ್ಪೊತ್ತಿನ ದಿವಸ ಸರಕಾರಿ ಜಮೀನನ್ನು ಹೊಡೆಯುತ್ತಾರೆ. ೧೯೭೭ರ ಸರ್ಕಾರಿ ಆಜ್ಞೆಯ ಪ್ರಕಾರ ಏನಾಯಿತು ಅಂದರೆ ೧೯೮೨-೮೩ರಲ್ಲಿ ೮,೮೬೯ ಎಕರೆ ಆದು ಆದ ನಂತರ, ೧೯೮೩-೮೪ರಲ್ಲಿ ೪೫,೦೯೭ ಎಕರೆ, ಆನಂತರ ೧೯೮೫-೮೬ರಲ್ಲಿ ೩೧,೩೮೫ ಎಕರೆ. ಅಂದರೆ ೧೯೮೨-೮೬ರಲ್ಲಿ ೮. ಸಾವಿರ ಎಕರೆ ಇದ್ದರೆ, ತಮ್ಮ ಕಾಲದಲ್ಲಿ ೪೫ ಸಾವಿರ ಮತ್ತು ೩೧ ಸಾವಿರ, ಅಂದರೆ ಸುಮಾರು ೮೦ ಸಾವಿರ ಎಕರೆಯಷ್ಟು ರೆಗ್ಯುಲರೈಸ್ ಮಾಡಿಬಿಟ್ಟಿದ್ದೀರಿ.

ಶ್ರೀ ಎಸ್. ಆರ್ ಬೊಮ್ಮಾಯಿ.—ತಾವು ಸರ್ಕಾರಿ ಆರ್ಡರ್ ಇಶ್ಯೂ ಮಾಡಿದ ದಿನಾಂಕವೂ ಇದೆ. ಅದನ್ನು ೧೯೮೧ರಲ್ಲಿ ಮಾಡಿದ್ದೀರಿ ಅದರ ಡೇಟ್ ಇದೆ. Applications should be filed before that date. ಅಪ್ಲಿಕೇಷನ್ ಪೆಂಡಿಂಗ್ ಇದೆ, ಅದನ್ನು ಆಪ್ಟ್ ಮಾಡಲಿಕ್ಕೆ ಬರುತ್ತದೆ. ಬೇರೆ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆವಾಗ ನಾವು ಟಾರ್ಗೆಟ್ ಫಿಕ್ಸ್ ಮಾಡಿದ್ದೇವೆ, ೧-೬-೧೯೭೭ರ ಜಿ. ಓ. ಪ್ರಕಾರ ಯಾರ್‍ಯಾರು ಎಲಿಜಿಬಲ್ ಇದ್ದಾರೋ, ಅವರನ್ನು ನಿಗದಿ ಮಾಡಿ ಎಲ್ಲಾ ಅಪ್ಲಿಕೇಷನ್ಸ್ ಕೊಟ್ಟು ರೆಗ್ಯುಲರೈಸ್ ಮಾಡಬೇಕೆಂದು ಹೇಳಿ,ನಾನು ಪ್ರತಿಯೊಂದು ತಾಲ್ಲೂಕಿಗೂ ಹೋಗಿ, ಅದನ್ನು ರಿವ್ಯೂ ಮಾಡಿಕೊಂಡು ಪ್ರತಿಯೊಬ್ಬ ಡೆಪ್ಯುಟಿ ಕಮೀಷನರ್‌ಗೂ ಡಿವಿಜನಲ್ ಕಮೀಷನರ್‌ರಿಗೂ ರಿಪೋರ್ಟ್‌ನ್ನು ಕೊಟ್ಟಿದ್ದೇನೆ. ಆ ಐಟಮ್ಸ್ ಮೇಲೆ ರಿವ್ಯೂ ಮಾಡಿದ್ದು, ಆವಾಗ ಅಷ್ಟು ಆರ್ಜಿಗಳು ಇರಲಿಲ್ಲ. ಇವೊತ್ತು ೮೦ ಸಾವಿರ ಎಕರೆಗಳು ರೆಗ್ಯುಲರೈಸ್ ಆಗಬೇಕಾದರೆ ಆ ಆರ್ಜಿಗಳು ಎಲ್ಲಿ ಇದ್ದವು?

ತಾವು ಈಗ ೧೯೮೦ನೇ ಇಸವಿಯ ಸರ್ಕಾರದ ಆದೇಶವನ್ನು ನೋಡಿ ಆ ಪ್ರಕಾರ ಹೇಳುವುದಾದರೆ ೧೯೮೨-೮೩ರಲ್ಲಿ ಸುಮಾರು ೪೦,೨೮೦ ಅಪ್ಲಿಕೇಶನ್ಸ್ ಆಮೇಲೆ ೧೯೮೩-೮೪ನೇ ಸಾಲಿನಲ್ಲಿ ನೋಡಿ ಸುಮಾರು ೧೧,೪೧೨ ಅರ್ಜಿಗಳು ಆಮೇಲೆ ೧೯೮೪-೮೫ನೇ ಸಾಲಿನಲ್ಲಿ ಸುಮಾರು ೧೮,೨೨೭ ಅರ್ಜಿಗಳು ಈಗ ೧೯೮೫-೮೬ನೇ ಸಾಲಿನಲ್ಲಿ ಸುಮಾರು ೨೫,೮೮೨ ಇವೆ. ಆದರೆ ೧೯೭೭ ನೇ ಇಸವಿಯಲ್ಲಿ ಆದ ಆಜ್ಞೆಯ ಪ್ರಕಾರ ಅನೇಕ ಜನ ಲಾಭ ಮಾಡಿಕೊಂಡಿದ್ದಾರೆ. ಮತ್ತು ದುರುಪಯೋಗ ಕೂಡ ಆಗಿದೆ. ನಾವು ಇದ್ದಾಗ ಈ ಬಗ್ಗೆ ಒಂದು ಡೇಟ್ ನಿಗದಿ ಮಾಡಿ ಪೆಂಡಿಂಗ್ ಅಪ್ಲಿಕೇಶನ್ಸ್ ಅನ್ನು ಡಿಸ್‌ಪೋಸ್ ಮಾಡಿದ್ದೆವು. ಆದರೂ ಆಗ ಬಹುತೇಕ ಅರ್ಜಿಗಳು ಇದ್ದವು ಆದರೆ ಇವತ್ತಿನ ದಿವಸ ಸ್ಕ್ರೂಟಿನಿ ಮಾಡಿ ಸುಮಾರು ೩೦ ಸಾವಿರದಿಂದ ಹಿಡಿದು ೫೦ ಸಾವಿರ ಅರ್ಜಿಗಳವರೆಗೆ ರೆಗ್ಯುಲರೈಜ್ ಆಗಿ ಬಿಟ್ಟಿವೆ ಈ ಬಗ್ಗೆ ತಾವು ಬೇಕಾದರೆ ಸಿ. ಒ. ಡಿ. ಎನ್‌ಕ್ವೈರಿ ಮಾಡಿಸಿ ಈ ಒಂದು ವ್ಯವಹಾರದಲ್ಲಿ ತಾಲ್ಲೂಕಿನ ತಹಶೀಲ್ದಾರರು ಮತ್ತು ಆ ತಾಲ್ಲೂಕಿನ ಮುಖಂಡರು ಸಹ ಶಾಮಿಲಾಗಿ ಕೆಲಸ ಮಾಡಿಕೊಂಡಿದ್ದಾರೆ ಯಾರಿಗೆ ಇದರಲ್ಲಿ ಪೆಸ್ಟೆಡ್ ಇಂಟರೆಸ್ಟ್ ಇರುತ್ತದೆಯೋ ಅವರು ಅವರಿಗೇ ಬೇಕಾದಂಥ ರೆಕಾರ್ಡ್ ಅನ್ನು ಬಿಲ್ಟ್‌ಅಪ್ ಮಾಡಿ ಸುಮಾರು ೮೦ ಸಾವಿರ ಎಕರೆ ಜಮೀನನ್ನು ರೆಗ್ಯುಲರೈಜ್ ಮಾಡಿಕೊಂಡಿದ್ದಾರೆ ಈ ಒಂದು ಕೆಲಸ ಕೇವಲ ಎರಡೇ ಎರಡು ವರ್ಷಗಳಲ್ಲಿ ನಡೆದಿದೆ ಆದ್ದರಿಂದ You have to probe thoroughly on this issue. ಎಂದು ಸ್ಪಷ್ಟವಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಈ ಪ್ರಕರಣದಲ್ಲಿ ತಾಲ್ಲೂಕಿನ ತಹಶೀಲ್ದಾರರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಹಾಗೂ ವಿಲೇಜ್ ಆಕೌಂಟೆಂಟ್ಸ್ ಸಹ ಶಾಮಿಲಾಗಿದ್ದಾರೆ. ಇದರಿಂದ ಬಡವರಿಗೆ ಸಿಗತಕ್ಕಂಥ ಸಹಾಯವನ್ನು ಯಾರೋ ಕೆಲವು ಜನ ಶ್ರೀಮಂತ ವರ್ಗದವರು ದೋಚಿಕೊಂಡು ಹೋಗಿದ್ದಾರೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಈ ೮೦ ಸಾವಿರ ಎಕರೆ ಜಮೀನಿನಲ್ಲಿ ಸುಮಾರು ೬೦ ಪರ್ಸೆಂಟ್‌ನಷ್ಟು ಹರಿಜನ ಮತ್ತು ಗಿರಿಜನರಿಗೆ ಹೋಗ ಬೇಕಾಗಿತ್ತು ಇನ್ನು ಉಳಿದ ೪೦ ಪರ್ಸೆಂಟ್‌ನಷ್ಟು ಬೇರೆಯವರಿಗೆ ಹೋಗಬೇಕಾಗಿ ಇತ್ತು. ಆದರೆ ಯಾರು ರೆಕಾರ್ಡ್ ಬಿಲ್ಟ್‌ಅಪ್ ಮಾಡಿಕೊಂಡರೋ ಅವರಿಗೆ ಹೋಯಿತು. ಈ ಜಮೀನುಗಳನ್ನು ರೆಗ್ಯುಲರೈಸ್ ಮಾಡುವಾಗ ತಹಶೀಲ್ದಾರರು ಲಂಚವನ್ನು ತೆಗೆದುಕೊಂಡು ರೆಗ್ಯುಲರೈಸ್ ಮಾಡಿ ಬಿಟ್ಟಿದ್ದಾರೆ. ಕೇವಲ ಎರಡೇ ಎರಡು ವರ್ಷಗಳಲ್ಲಿ ಆಗಿರತಕ್ಕಂಥಾದ್ದು ತಾವು ಬೇಕಾದರೆ ತಮ್ಮ ವರದಿಯನ್ನು ನೋಡಿ ತಾವು ಸರಿಯಾಗಿ ಇದನ್ನು ರಿವ್ಯೂ ಮಾಡಿಲ್ಲ ಎಂದು ಗೊತ್ತಾಗುತ್ತದೆ ನನ್ನ ಬಳಿ ಈಗ ಸುಮಾರು ನಾಲ್ಕು ವರ್ಷದ ಹಿಂದಿನ ವರದಿಗಳು ಇವೆ. ತಾವು ಈ ಪ್ರಶ್ನೆ ಮಾಡುತ್ತೀರಿ ಎನ್ನುವ ದೃಷ್ಟಿಯಿಂದಲೇ ನಾನು ಆ ವರದಿಗಳನ್ನು ತೆಗೆದು ಇಟ್ಟುಕೊಂಡಿದ್ದು ೧೯೮೨ನೇ ಇಸವಿಯಿಂದ ೮೬ನೇ ಇಸವಿಯವರೆಗೆ ವರದಿಗಳು ನನ್ನ ಬಳಿ ಇವೆ ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ ತಾವು ಸ್ವಲ್ಪ ನೋಡಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಬಡವರಿಗೆ ಏನುಕೂಲವಾಗುತ್ತಿತ್ತು ಆದರೆ ಇವತ್ತು ಆ ವರ್ಗದ ಜನರಿಗೆ ಅನಾನುಕೂಲವಾಗಿದೆ ನಿಜವಾಗಿ ಯಾರು ಬಡವರಿದ್ದಾರೆ ಅವರಿಗೆ ತೊಂದರೆ ಯಾಗಿದೆ. ಈ ಎರಡು ವರ್ಷದಲ್ಲಿ ಈ ಬಡ ವರ್ಗದ ಹರಿಜನ ಮತ್ತು ಗಿರಿಜನರಿಗೆ ಸಿಗಬೇಕಾಗಿದ್ದಂತಹ ೬೦ ಪರ್ಸೆಂಟ್‌ನಲ್ಲಿ ಇವರಿಗೆ ಸಿಕ್ಕಿರುವುದು ಕೇವಲ ೨೨ ಪರ್ಸೆಂಟ್ ಮಾತ್ರ ತಾವು ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದಾಗ ಸ್ಪಷ್ಟವಾಗಿ ಗೊತ್ತಾಗುತ್ತದೆ ಇನ್ನು ನಮ್ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೂಡ ತಮ್ಮ ವರದಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿ ಒಂದು ಶಿಫಾರಸ್ಸು ಸಹ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವರು ತಮ್ಮ ವರದಿಯಲ್ಲಿ ಎನು ಹೇಳಿದ್ದಾರೆಂದರೆ ಚಿಕ್ಕಮಗಳೂರು, ಹಾಸನ, ಮತ್ತು ಕೊಡಗು ಜಿಲ್ಲೆಗಳಲ್ಲಿ ಸರ್ಕಾರದ ಜಮೀನು ಇದೆ. ಈ ಜಮೀನನ್ನು ಆಲ್ದಿನ ಕಾಫಿ ಪ್ಲಾಂಟರ್ಸ್ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಸಹ ಅವರು ಹೇಳಿದ್ದಾರೆ ಅವರು ಕೊಟ್ಟಿರುವ ಒಂದು ಅಂಕಿಅಂಶದ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು ೭,೬೨೫ ಎಕರೆ ಜಮೀನು, ಹಾಸನ ಜಿಲ್ಲೆಯಲ್ಲಿ ಸುಮಾರು ೨,೧೦೭ ಎಕರೆ ಜಮೀನು ಮತ್ತು ಕೊಡಗು ಜಿಲ್ಲೆಯಲ್ಲಿ ಸುಮಾರು ೩,೭೭೭ ಎಕರೆ ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ಹೇಳಿದ್ದಾರೆ. ಅಂದರೆ ಒಟ್ಟು ೧೪ ಸಾವಿರ ಎಕರೆ ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆ There is something you have to probe it thoroughly. ತಾವು ಈ ಒಂದು ಆಧಾರದ ಮೇಲೆ ಸುಮಾರು ೧೪ ಸಾವಿರ ಎಕರೆ ಜಮೀನು ಯಾರು ಎನ್‌ಕ್ರೋಚ್ ಮಾಡಿದ್ದರೋ ಅವರ ಸಲುವಾಗಿ ೧೯೮೪ನೇ ಇಸವಿಯ ಒಂದು ಸರ್ಕಾರದ ಆರ್ಡರ್ ಅನ್ನು ಹೊರಡಿಸಿದ್ದೀರಿ. ಆ ಆಜ್ಞೆಯ ಪ್ರಕಾರ ತಾವು ಎನು ಹೇಳಿದ್ದೀರಿ ಎಂದರೆ ಈ ರೀತಿ ಯಾರ್ಯಾರು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದಾರೋ ಆ ಜಮೀನನ್ನು ರೆಗ್ಯುಲರೈಜ್ ಮಾಡಬೇಕೆಂದು ತಾವು ಆ ರೀತಿ ಏನಾದರೂ

ಮಾಡಿದರೆ ನಿಜವಾಗಿಯೂ ಈ ಬಡವರ್ಗದ ಜನರಿಗೆ ಅನುಕೂಲವಾಗುವುದಿಲ್ಲ ದೊಡ್ಡ ದೊಡ್ಡ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತದೆ ಆದ್ದರಿಂದ ತಾವು ಈ ಕೆಲಸ ಮಾಡುವುದಕ್ಕೆ ಹೋಗಬೇಡಿ ನಾನು ಮಂತ್ರಿಯಾಗಿದ್ದಾಗ ಕೂಡ ಇದೇ ರೀತಿಯ ಒತ್ತಡ ಬಂತು ಆಗ ನಾನು ಈ ಕೆಲಸವನ್ನು ಮಾಡದೆ ಮುಂದಕ್ಕೆ ಹಾಕಿಕೊಂಡು ಬಂದಿದ್ದೇನೆ ಆದರೆ ಈಗ ಯಾರದೋ ಒತ್ತಡ ಬಂದಿರುವುದರಿಂದ ತಾವು ಈ ರೀತಿ ಮಾಡುವುದಕ್ಕೆ ಹೊರಟಿರಬಹುದು ಆದ್ದರಿಂದ ತಾವು ಈ ಕೆಲಸವನ್ನು ಬಿಟ್ಟು ಕಡೆಯ ಪಕ್ಷ ಅಲ್ಲಿ ಯಾರು ನಿರುದ್ಯೋಗಿಗಳು ಇರುತ್ತಾರೋ ಅವರಿಗೆ ಹಂಚಿ ಅವರು ತಮ್ಮ ಕಾಲ ಮೇಲೆ ತಾವು ನಿಂತು ಕೊಂಡು ಜೀವನ ಮಾಡಿ ಕೊಳ್ಳುವಂತೆ ಅವಕಾಶ ಮಾಡಿಕೊಡಿ. ಯಾರು ಬಡವರು ಇರುತ್ತಾರೋ ಅಂತಹವರಿಗೆ ಒಂದು ೫ ಎಕರೆ ಜಮೀನನ್ನು ಹಂಚಿಕೆ ಮಾಡಿ ಇಲ್ಲದಿದ್ದರೆ ಯಾರು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೋ ಅವರಿಗೆ ಈ ಜಮೀನುಗಳನ್ನು ರೆಗ್ಯುಲರೈಜ್ ಮಾಡುವುದಾದರೆ ಬಹಳ ತೊಂದರೆ ಯಾಗುತ್ತದೆ ...

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಒಂದು ಬಿಲ್ಲಂ ತರುತ್ತಿದ್ದೇವೆ. ಈ ಬಗ್ಗೆ ನಾನು ಮಾನ್ಯ ವಿರೋಧಪಕ್ಷದ ಎಲ್ಲಾ ನಾಯಕರಂಗಳನ್ನು ಕರೆಸಿ ಚರ್ಚೆ ಮಾಡಿದ್ದೇವೆ. ಎಲ್ಲರ ಒಪ್ಪಿಗೆಯನ್ನು ಆ ಬಿಲ್ಲು ತರುತ್ತಿದ್ದೇನೆ. ಈ ಪಡೆದು ಸದನೆದಲ್ಲಿ ಆ ಬಿಲ್ಲು ಬಂದಾಗ ತಾವು ಬೇಕಾದರೆ ತಿದ್ದುಪಡಿಯನ್ನು ಸೂಚನೆ ಮಾಡಬಹುದು ಆ ಬಿಲ್ಲು ನೋಡಿದರೆ ಅದರಲ್ಲಿ ಯಾರಿಗೂ ದೊಡ್ಡ ದೊಡ್ಡ ಶ್ರೀಮಂತ ಕಾಫಿ ಪ್ಲಾಂಟೇಷನ್‌ದಾರರಿಗೆ ಸಹಾಯ ಮಾಡಬೇಕೆಂದು ಇಲ್ಲ ೫–೧೦ ಎಕರೆ ಇಟ್ಟು ಕೊಂಡಿರತಕ್ಕಂಥ ಪ್ಲಾಂಟೇಷನ್‌ದಾರರಿಗೆ ಸಹಾಯವಾಗುತ್ತದೆ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಬಿಲ್ಲು ಬಂದಾಗ ತಿದ್ದುಪಡಿ ಸೂಚನೆ ಬೇಕಾದರೆ ಮಾಡೋಣ ಆದರೆ ಈಗ ಬಡವರಿಗೆ ಮೋಸವಾಗುತ್ತದೆ ನೀವು ಜಮೀನನ್ನು ಹೆಚ್ಚು ಮಾಡುವುದಕ್ಕೆ ಬರುವುದಿಲ್ಲ ಹಣವನ್ನು ಬೇಕಾದರೂ ಹೆಚ್ಚು ಮಾಡಿಕೊಳ್ಳಬಹುದು ಆದರೆ ಇದರಿಂದ ಬಡಪರಿಗೆ ಅನು ಕೂಲ ಮಾಡಿಕೊಡಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ವಿರೋಧಪಕ್ಷದ ನಾಯಕರುಗಳನ್ನು ಕರೆದು ಚರ್ಚೆ ಮಾಡಿದ್ದೇನೆ.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಕೂಡ ನಾನು ಹೇಳುತ್ತೇನೆ. ಸುಮಾರು ೧೮೦–೧೯೦ ಎಕರೆ ಇಟ್ಟುಕೊಂಡಿರತಕ್ಕಂಥ ಜಮೀನುದಾರರಿಗೆ ನೀವು ಈ ಜಮೀನನ್ನು ಕೊಡುವುದು ಬೇಡ ಅಲ್ಲಿ ಯಾರು ನಿರುದ್ಯೋಗಿಗಳು ಇರುತ್ತಾರೋ ಯಾರು ಬಡವರು ಇರುತ್ತಾರೋ ಅವರಿಗೆ ಸಹಾಯ ಮಾಡುವ ಸಲುವಾಗಿ ಒಂದು ರೋಸ್ಟರ್ ಪದ್ಧತಿ ಮಾಡಿ ಆ ಪ್ರಕಾರ ಯಾವ ಜಾತಿಯವರೇ ಬರಲಿ ಅವರಿಗೆ ಜಮೀನು ಕೊಡಿ. ಇದರಿಂದ ಅವರು ತಮ್ಮ ಕಾಲ ಮೇಲೆ ತಾವು ನಿಂತು ಜೀವನ ಮಾಡಿಕೊಳ್ಳುತ್ತಾರೆ ತಾವೇನಾದರೂ ಆ ಕೆಲಸವನ್ನು ಮಾಡದಿದ್ದರೆ ಖಂಡಿತವಾಗಿ ಚಳುವಳಿ ನಡೆಯುಂ ತ್ತದೆ. ಈಗಾಗಲೇ ಚಿಕ್ಕಮಗಳೂರಿನಲ್ಲಿ ಕಾರ್ಮಿಕರು ಒಂದು ಚಳುವಳಿಯನ್ನು ಮಾಡಿ ಪ್ರೊಟೆಸ್ಟ್ ಮಾಡಿದ್ದಾರೆ ನಮಗೆ ರೆಗ್ಯುಲರೈಜ್ ಮಾಡಬೇಕೆಂದು. ತಾವೇನಾದರೂ ಆ ರೀತಿ ಮಾಡಿದರೆ ಈ ಜನರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ತಾವು ಆ ಕಳಂಕವನ್ನು ಹೊತ್ತುಕೊಳ್ಳಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಆ ಬಿಲ್ಲು ಬಂದಾಗ ನೋಡಿ ಆದರಲ್ಲಿ ಯಾರಿಗೆ ಅನು ಕೂಲವಾಗುತ್ತದೆಂದು ತಮಗೆ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಬಿಲ್ಲಂ ಬರಲಿ ಅದು ಸರಿಯಾಗಿಲ್ಲವೆಂದು ಹೇಳಿದರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆದರಲ್ಲಿ ತಪ್ಪೇನೂ ಇಲ್ಲ ಈಗ ತಾವು ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರ ಕೈಪಿರುವ ಶಿಫಾರಸ್ಸು ಅನ್ನು ಸಹ ಗವರ್ನಮೆಂಟಿಗೆ ತೆಗೆದುಕೊಳ್ಳಬೇಕು ಯಾರಿಗೆ ಜಮೀನು ಇಲ್ಲವೋ ಅಂತಹವರಿಗೆ ಜಮೀನು ಹಂಚಬೇಕೆಂದು ನಾನು ಹೇಳುತ್ತೇನೆ.

ಮತ್ತೊಂದನೆಯದಾಗಿ. ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಏನಾಗಿದೆ ಎಂದರೆ. ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಸ್ವಲ್ಪ ಕರಪ್ಷನ್ ಇದೆ, ಇದನ್ನು ತಾವು ಒಪ್ಪಬಹುದು. ಯಾರೋ ಒಬ್ಬ, ಯಾರದೋ ಜಮೀನನ್ನು, ಬೇರೆ ಬೇರೆ ಕಾರಣಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವಂಥ ಒಂದು ದೊಡ್ಡ ರಾಕೆಟ್ ನಡೆಯುತ್ತಿದೆ. ಕೆಲವು ದಳ್ಳಾಳಿಗಳು, ಒಂದು ಎಕರೆಗೆ. ಸಂಬಂಧಪಟ್ಟ ಅಧಿಕಾರಿಗಳಿಗೆ,

ಆದರ ಬೆಲೆ ೩-೪ ಸಾವಿರ ಇದ್ದರೆ, ೧೦-೧೦ ಸಾವಿರದವರೆಗೂ ಕೊಡತಕ್ಕ ಅನೇಕ ಉದಾಹರಣೆಗಳು ಇವೆ. ಇದು ತಮ್ಮ ಗಮನಕ್ಕೂ ಬಂದಿರಬಹುದು. ಪ್ರಾಜೆಕ್ಟ್‌ಗಳು ಎಲ್ಲೆಲ್ಲಿ ಇವೆ, ಅಲ್ಲಿ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಮಾಡತಕ್ಕಂಥ ಕೆಲಸ ಇದಾಗಿದೆ. ಆದ್ದರಿಂದ ಅವರನ್ನು ಕರೆದು ಇದರ ಬಗ್ಗೆ ರಿವ್ಯೂ ಮಾಡಬೇಕು. ಇದರ ಬಗ್ಗೆ ಒಂದು ಕಮಿಟಿ ಮಾಡಿ, ಇದನ್ನು ರಿವ್ಯೂ ಮಾಡುವುದರಲ್ಲಿ ತಪ್ಪಿಲ್ಲ. ಅಲಮಟ್ಟಿ ಯು. ಕೆ. ಪಿ. ಯಾವುದೇ ತೆಗೆದು ಕೊಳ್ಳಿ. ಅಲ್ಲಿರತಕ್ಕ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಲಕ್ಷಾಂತರ ರೂಪಾಯಿ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ಕಮಿಟಿ ಮಾಡಿ ಸ್ಕ್ಯಾಂಪಲ್ ಆಗಿ ಒಂದೆರಡು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ, ಕೊನೇಪಕ್ಷ ಮುಂದೆ ಬರತಕ್ಕಂಥವರು ಹೆದರುತ್ತಾರೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ತಾವು ಒಂದು ರಾಕೆಟ್ ಎಂದು ಹೇಳುತ್ತೀರಿ. ಮಲಪ್ರಭಾ ಪ್ರಾಜೆಕ್ಟ್‌ಗೆ ಕಾಂಪೆನ್‌ಸೇಷನ್ ಎಂದ ಅಂದಾಜು ಮಾಡಿದ್ದು ೩೮ ಕೋಟಿ ರೂಪಾಯಿ. ಅದು ಈಗ ೩೦೦ ಕೋಟಿ ರೂಪಾಯಿ ಆದರೂ ಆಗಬಹುದಿಲ್ಲ. ಇದರ ರೆಫರೆನ್ಸ್ ಇದೆ. ಇದರ ಬಗ್ಗೆ ಡಿಕ್ರಿಗಳು ಆಗಿರ, ಹಣ ಕೊಟ್ಟಿದೆ. ಕಳೆದ ಹಲವಾರು ವರ್ಷಗಳಿಂದ ಈ ವಿಚಾರದಲ್ಲಿ ಕೋಟಿಗಟ್ಟಲೆ ಹಣ ಸ್ಪಿಂಡಲ್ ಆಗಿದೆ. ಬಣ ಬೇಸಾಯದ ಭೂಮಿಗಳು ತರೀ ಭೂಮಿಗಳಾಗಿವೆ. ಇದರ ಬಗ್ಗೆ ಲಾ ವಿಂನಿಸ್ಟರು ಮತ್ತು ರೆವಿನ್ಯೂ ಕಮಿಷನರ್ ಅವರು ಯು. ಕೆ. ಪಿ. ಗೆ ಹೋಗಿ ರಿವ್ಯೂ ಮಾಡಿ ಬಂದಿದ್ದಾರೆ. ಇದನ್ನು ನಿಲ್ಲಿಸಂವುದಕ್ಕೆ ಏನಾದರೂ ಸಲಹೆ ಇದ್ದರೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಮಿಟಿ ಮಾಡಿ. ತಾಲ್ಲೂಕಿಗೆ ಭೇಟಿ ಕೊಡಲಿ. ಅಲ್ಲಿರತಕ್ಕ ಎವಿಡೆನ್ಸ್ ನೋಡಿ, ಯಾರೇ ಅಧಿಕಾರಿ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಈ ರೀತಿ ಆದರೆ, ಇದು ನನ್ನ ಕಾಲದಲ್ಲಿ ಆಥವಾ ಇನ್ನೊಬ್ಬರ ಕಾಲದಲ್ಲಿ ಆಗಿದೆ ಎಂದು ಹೇಳಬಹುದು ಇದಕ್ಕೆ ಯಾರದೂ ಅಡ್ಡಿ ಇಲ್ಲ. ಎಲ್ಲೆಲ್ಲಿ ಈ ಒಂದು ರಾಕೆಟ್ ನಡೆದಿದೆ, ಅಂತಹ ಕಡೆಗಳಿಗೆ ಈ ಕಮಿಟಿ ಹೋಗಿ ನೋಡಬೇಕು. ಈ ರೀತಿ ಮಾಡಿದರೆ, ಮುಂದಿನವರು ಹೆದರುತ್ತಾರೆ. ನೀವು ಹೇಳಿದ ಹಾಗೆ ಖುಷ್ಕಿ ಜಮೀನು ತರೀ ಜಮೀನು ಆಗಿದೆ. ಆದ್ದರಿಂದ ಇದರ ಬಗ್ಗೆ ಒಂದು ಕಮಿಟಿ ಮಾಡಿ ತನಿಖೆ ಮಾಡಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷೆಯವರೇ, ಮಾನ್ಯ ಕಂದಾಯ ಸಚಿವರಿಗೆ, ಈ ವಿಷಯ ತಿಳಿದುಕೊಳ್ಳಬೇಕೆಂದೇನೂ ಇಲ್ಲ. ನಾವೂ ಅವರು ಪಿ. ಎ. ಸಿ. ಕಮಿಟಿಯಲ್ಲಿ ಕೆಲಸ ಮಾಡುವಾಗ, ಇದನ್ನು ವಿಶೇಷವಾಗಿ ನೋಡಿದ್ದೇವೆ. ಇದರ ಬಗ್ಗೆ ಅವರಿಗೂ ಮಾಹಿತಿ ಇದೆ. ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ತಮ್ಮ ಆದಾಯಕ್ಕಿಂತ ಹೆಚ್ಚಾಗಿ ಆಸ್ತಿಪಾಸ್ತಿ ಮಾಡಿದ್ದಾರೆ. ಅಂತಹ ಮೇಲೆ ಒಂದು ಸರ್ವೆ ಕಂಡಕ್ಟ್ ಮಾಡಿ, ಪ್ರಾಸಿಕ್ಯೂಟ್ ಮಾಡಿದರೆ ಸರಿಹೋಗುತ್ತದೆ. ಗವರ್ನಮೆಂಟ್ ಮಿಷನರಿ ಇದೆ, ಸರ್ಕಾರಕ್ಕೆ ಇದೇನು ದೊಡ್ಡ ಕೆಲಸವಲ್ಲ. ಇದಕ್ಕೆ ಕಮಿಟಿ ಏಕೆ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಎಲ್ಲಾ ಕಡೆ ನಡೆದಿದೆ. ವಿಶೇಷವಾಗಿ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಜಾಸ್ತಿ ನಡೆದಿದೆ. ನಾಲ್ಕು ಜನರಿಗೆ ಬರೆ ಹಾಕಿದರೆ, ಎಲ್ಲಾ, ಕಡೆ ಸರಿಹೋಗುತ್ತದೆ ಈಗ ನಿಮಗೆ ಕೆಲಸ ಜಾಸ್ತಿಯಾಗಿದೆ. ನೀವು ಡೆಲ್ಲಿಗೂ ಹೋಗಬೇಕು, ಪಾರ್ಟಿಯಲ್ಲಿ ಆಗುವ ಜಗಳ ಸರಿಮಾಡಬೇಕು. ಹೀಗಾಗಿ ಇದರ ಕಡೆ ಲಕ್ಷ್ಯ ಕೊಡಿಮೆ ಆಗಿದೆ. ಇದು ಮಹತ್ವವಾದುದು. ಇದರ ಕಡೆಗೆ ಗಮನ ಕೊಡಬೇಕು. ಹಾಗೂ ಇದನ್ನು ಮಾಡುತ್ತೀರೆಂದು ನಂಬಿದ್ದೇನೆ. ಮುಂದಿನೆಯದಾಗಿ ಗ್ರಾಮ ಸಹಾಯಕರ ಬಗ್ಗೆ ತಮಗೆ ಹೇಳಬೇಕಾದರೆ. ಅವರಿಂದ ಹಳ್ಳಿಗಳಲ್ಲಿ ಕೆಲಸ ತೆಗೆದುಕೊಳ್ಳುತ್ತೀರಿ. ಅವರಿಗೆ ರಕ್ಷಣೆ ಇಲ್ಲ. ಇವತ್ತು ೧೧,೪೫೦ ಜನ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲಾ ಸ್ವೈಫೆಂಡರಿಯಾಗಿ ಕೆಲಸ ಮಾಡುತ್ತಿದ್ದಾರೆ) ಅವರಿಗೆ ೧೭೫ ರೂಪಾಯಿ ಕೊಡುತ್ತಿದ್ದೀರಿ. ಅವರ ಕೆಲಸವೂ ತಾತ್ಕಾಲಿಕ. ಅನೇಕ ಕಡೆಗಳಲ್ಲಿ ಈ ಪಗಾರವನ್ನು ಕೊಡುವುದಕ್ಕೂ ಹಣ ಇಲ್ಲ ಕೆಲವು ಕಡೆ ತಹಶೀಲ್ದಾರ್‌ರವರು ಹಣ ಇಲ್ಲ ಎಂದು ಹೇಳುತ್ತಾರೆ. ಅವರು ಬಂದು ನೀವಾದರೂ ಫೋನ್ ಮಾಡಿ ಕೂಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಇಂತಹ ಪರಿಸ್ಥಿತಿ ಬಂದಿದೆ. ನೀವು ಪ್ರತಿ ತಿಂಗಳೂ, ಪ್ರತಿ ತಹಶೀಲ್ದಾರರಿಗೂ ಬಜೆಟ್ ರಿಲೀಸ್ ಮಾಡಬೇಕು. ಅವರಿಗೆ ಕೊಡುವುದು ೧೭೫ ರೂಪಾಯಿ ಆದರೂ ಅವರು ವಿಲೇಜ್ ಅಕೌಂಟೆಂಟ್ ಬಂದರೂ ಹೋಗಬೇಕು, ರೆವಿನ್ಯೂ ಇನ್ಸ್‌ಪೆಕ್ಟರ್ ಬಂದರೂ ಹೋಗಬೇಕು. ಪೋಲೀಸಿನವರು ಬಂದರೂ ಹೋಗಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟ್ ಎಲ್ಲರೂ ರೆಸ್‌ಪಾನ್ಸಿಬಲ್ ಆಗಿ ನಡೆದುಕೊಳ್ಳಬೇಕು. ಅದಕ್ಕಾಗಿ ದಯವಿಟ್ಟು, ಈಗಿನ ಕಾಲದಲ್ಲಿ ನೀವು

ಎಲ್ಲರಿಗೂ ಭತ್ಯೆ ಜಾಸ್ತಿ ಮಾಡಿದ ಹಾಗೆ, ಇವರಿಗೂ ಜಾಸ್ತಿ ಮಾಡಬೇಕು. ಇವರಿಗೆ ನಾನಂ ಇದ್ದಾಗ ೭೫ ರೂಪಾಯಿ ಮಾಡಿದ್ದೆ, ಈಗ ೧೨೫ ರೂಪಾಯಿ ಆಗಿದೆ. ಮಾನ್ಯ ಮಂತ್ರಿಗಳು ಇವರಿಗೆ ಭತ್ಯವನ್ನು ರಿವೈಸ್ ಮಾಡು ವವ್ಯವಸ್ಥೆ ಮಾಡಬೇಕು, ಅದನ್ನು ಇಲ್ಲಿ ಪ್ರಕಟಣೆ ಮಾಡಬೇಕು.

ಶ್ರೀ. ಬಿ ಬಸವಲಿಂಗಪ್ಪ. - ಮೊದಲು, ತೋಟಿ, ತಳವಾರರಿಗೆ ಸಂಬಳ ಕೊಡುವಂತೆ ಮಾಡಿದ್ದು ನಾನೇ ಆಗ ೭೫-೧೦೦ ಎಂದರೆ, ಅದೇ ಈಗ ೩೦೦ ರೂಪಾಯಿ ಆಗುತ್ತದೆ, ಇವತ್ತು ಬೆಲೆ ಜಾಸ್ತಿಯಾಗಿ, ನೀವು ಅವರಿಗೆ ಕೊಡತಕ್ಕದ್ದಕ್ಕೆ ಬೆಲೆ ಇಲ್ಲದಂತಾಗಿದೆ. ಒಂದು ರೂಪಾಯಿ ಬೆಲೆ ೧೫-೧೪ ಪೈಸೆ ಇದೆ. ಆದ್ದರಿಂದ ಮಾನ್ಯಸದಸ್ಯರು ಹೇಳಿದಹಾಗೆ, ಕೊನೆಯ ಪಕ್ಷ ಅವರಿಗೆ ಮೂರು ನೂರು ರೂಪಾಯಿ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕೆ ಎಲ್ಲರ ಮನವಿ ಇದೆ. ಇದು ಒಂದು ಕಡೆ. ಎರಡನೆಯದಾಗಿ, ಪೆನ್‌ಷನ್. ಇದು ದೊಡ್ಡ ಅಧಿಕಾರಿಗಳಿಗೆ ಹೋಗುತ್ತಿದೆ. ಆದರೆ ತೋಟಿ, ತಳವಾರ ನೀರುಗಂಟಿ ಇವರುಗಳಿಗೆ ೭೫ ರೂಪಾಯಿ ಕೊಡಬೇಕೆಂದು ಇದೆ. ಆದರೆ ಯಾವುದೇ ಜಿಲ್ಲೆಗೆ ಹೋದರೂ ಇದಕ್ಕೆ ಬಜೆಟ್ ಇಲ್ಲ. ಕೆಲವು ಕಡೆ ಅಂದರೆ ಬೆಂಗಳೂರು ಜಿಲ್ಲೆಯಲ್ಲಿ ಜನರು ಪದೇ ಪದೇ ಕೇಳಿಕೊಳ್ಳುತ್ತಾರೆ, ಇಂತಹ ಕಡೆ ಸಿಕ್ಕಿದೆ, ನನ್ನ ತಾಲ್ಲೂಕಿನಲ್ಲಿ ಸಂಬಾರು ಆರು ತಿಂಗಳಿಂದ ಪೇಮೆಂಟ್ ಇಲ್ಲ. ನೀವು ನೂರೆಂಟು ಪೆನ್‌ಷನ್ ಅನೌನ್ಸ್ ಮಾಡಿದ್ದೀರಿ. ವಿಧವಾ ವೇತನಾ, ಸಂಗೀತಕ್ಕೆ, ನಾಟಕಕ್ಕೆ ಹೀಗೆ ಎಷ್ಟೋ ಕೊಡುತ್ತಿದ್ದೀರಿ. ಈ ಪೆನ್‌ಷನ್ ಕೊಡುವುದಕ್ಕೆ ದುಡ್ಡು ಇಲ್ಲ ಎಂದರೆ ಹೇಗೆ? ನಿಜವಾಗಿಯೂ ಆಶ್ಚರ್ಯವಾಗುತ್ತದೆ. ತಾವು ಇದರ ಬಗ್ಗೆ ರಿವ್ಯೂ ಮಾಡಿ ೬-೮ ತಿಂಗಳಿಂದ ಪೆನ್‌ಷನ್ ಸಿಕ್ಕಿಲ್ಲ ಹಾಗೂ ಗ್ರಾಮಸಹಾಯಕರಿಗೆ ಪಗಾರ ಸಿಕ್ಕಿಲ್ಲ ಎಂಬುದು ಖಂಡನೀಯ ಎಂದು ಹೇಳಬೇಕಾಗುತ್ತದೆ.

೩-೩೦ ಪಿ. ಎಂ.

ಅದಕ್ಕಾಗಿ ತಾವು ಲಕ್ಷ್ಯ ಕೊಡುತ್ತಾ ಇದ್ದೀರಿ. ಇದನ್ನು ತಾವು ರಿವ್ಯೂ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಎಷ್ಟೊಂದು ಜನಕ್ಕೆ ಪೆನ್‌ಷನ್ ಕೊಡುತ್ತಾ ಇದ್ದೀರಿ ಈ ಬಗ್ಗೆ ಪ್ರತಿಯೊಂದು ಜಿಲ್ಲೆಯ ಸ್ಟ್ಯಾಟಿಸ್ಟಿಕ್ಸ್ ತರಿಸಿ, ಆವಾಗ ತಮಗೇ ಗೊತ್ತಾಗುತ್ತದೆ.

ಇನ್ನು ಮುಜರಾಯಿ ಬಗ್ಗೆ ಹೇಳುವುದಾದರೆ ನಾನು ಕೂಡ ಇದರಲ್ಲಿ ಸ್ವಲ್ಪ ದಿವಸ ಇದ್ದೆ. ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ರಿಸರ್ವೇಷನ್ ಇದೆ. ಈ ಡಿಪಾರ್ಟ್‌ಮೆಂಟ್‌ನಲ್ಲಿರಲಿಲ್ಲ ನನಗೆ ತಿಳಿದಿರುವ ಪ್ರಕಾರ. ಇದಕ್ಕಿಂತಲೂ ಹೆಚ್ಚಿನ ಮಾಹಿತಿ ನನ್ನಲ್ಲಿಲ್ಲ. ಈ ಮುಜರಾಯಿ ಡಿಪಾರ್ಟ್‌ಮೆಂಟಿನ ಪರದಿ ನೋಡಿದಾಗ ಇದರಲ್ಲಿ ಅಣ್ಣಮ್ಮನ ದೇವಸ್ಥಾನಕ್ಕೆ ಇಷ್ಟು ಮಾರಮ್ಮನ ದೇವಸ್ಥಾನಕ್ಕೆ ಇಷ್ಟು ಅಂತ ಬರೆದಿದ್ದಾರೆ. ನಾನಂ ಕೇಳಿದೆ ಅವರು ಇದರ ಬಗ್ಗೆ ಒಂದು ಪರ್ಸೆಂಟೇಷನ್ ಕಳುಹಿಸುತ್ತಾರೆ, ಅದರ ಮೇಲೆ ಇವರು ಕೊಡುತ್ತಾರೆ. ಇದರಲ್ಲಿ ಮುಜರಾಯಿ ಮತ್ತು ನಾನ್ ಮುಜರಾಯಿ ಅಂತ. ನಾನ್ ಮುಜರಾಯಿಗೆ ಸೇರಿದಂಥ ದೇವಸ್ಥಾನಗಳೂ ಸಹ ಇವೆ. ಇಂಥಾದ್ದು ೯೦ ಪರ್ಸೆಂಟ್ ಇದೆ. ಅವರ್ಯಾರೂ ನಿಮ್ಮ ಕಡೆ ಬಂದಿಲ್ಲ. ನಾನ್ ಮುಜರಾಯಿಗೆ ಯಾವ್ಯಾವದು ಸೇರಿವೆ ಅನ್ನುವುದನ್ನು ಅಲ್ಲಿನ ತಹಸೀಲ್ದಾರರು ಕಳುಹಿಸುತ್ತಾರೆ. ಈ ಬಜೆಟ್‌ನಲ್ಲಿ ನಾನ್ ಮುಜರಾಯಿಗೆ ಸೇರಿದ ಹಾಗೆ ಯಾವುದೂ ಬರುವುದಿಲ್ಲ. ಅಂಥಾದ್ದರಲ್ಲಿ ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಈ ಮುಜರಾಯಿ ಇಲಾಖೆಗೆ ೧೩ ಕೋಟಿ ರೂಪಾಯಿ ಇಟ್ಟಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ಕಡೆಯವರಂ ಯಾರು ಕೂಡ ಇವರನ್ನು ಹಣ ಕೇಳುವುದಕ್ಕೆ ಬರುವುದಿಲ್ಲ. ಅಲ್ಲಿಗೆ ನಮ್ಮ ರಾಜ್ಯದಲ್ಲಿ ಉಳಿದಿರತಕ್ಕಂಥಾ ೯ ಜಿಲ್ಲೆಗಳಿಗೆ ಮಾತ್ರ ಇವರು ಈ ಹಣ ಖರ್ಚು ಮಾಡುತ್ತಿದ್ದಾರೆ ಅಂದರೆ ಇವರು ಈ ಜಿಲ್ಲೆಗಳಿಗೆ ೧೦ ಪರ್ಸೆಂಟ್ ಹಣ ಖರ್ಚು ಮಾಡಿದ ಹಾಗಾಯಿತು. ನಾನು ಕೇಳುತ್ತೇನೆ ಏತಕ್ಕೆ ಇವರು ಇಷ್ಟು ಹಣವನ್ನು ಈ ೯ ಜಿಲ್ಲೆಗಳಿಗೆ ಖರ್ಚು ಮಾಡಬೇಕು ಎಂದು. ಎಲ್ಲಿ ಅವಶ್ಯಕವಾಗಿ ಈ ಹಣವನ್ನು ಕೊಡಬೇಕೋ ಅಲ್ಲಿ ಮಾತ್ರ ಕೊಡಬೇಕು. ವಿಕ್ಕಿದ್ದನ್ನು ಬಿಟ್ಟುಬಿಡಬೇಕು. ನನಗೆ ತಿಳಿದ ಹಾಗೆ ಇವರಂ ಏನು ಮಾಡುತ್ತಾರೆಂದರೆ ಯಾವ್ಯಾವ ದೇವರು ಪವರ್‌ಫುಲ್ ಇದೆಯೋ ಯಾವ್ಯಾವ ಜನ ಪವರ್‌ಫುಲ್ ಇದ್ದಾರೋ, ಯಾವ್ಯಾವ ಜನಾಂಗ ಪವರ್‌ಫುಲ್ ಇದ್ದಾರೋ ಅಲ್ಲಿಗೆ ಹೆಚ್ಚು ಖರ್ಚು ಮಾಡುತ್ತಾರೆ. ನಾನು ಹೇಳುವುದೇನೆಂದರೆ, ಅಂಥಾ ಕಡೆಗಳಲ್ಲಿ ದೇವಸ್ಥಾನಕ್ಕೆ ಹೆಚ್ಚು ಖರ್ಚು

ಮಾಡುವ ಬದಲು ಅಲ್ಲಿ ಒಂದು ಧರ್ಮ ಶಾಲೆಯನ್ನು ಕಟ್ಟಿಸಿಕೊಡಿ ಎಲ್ಲರಿಗೂ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಅವಶ್ಯಕವಾಗಿ ಇದೆಯೋ ಅಂಥಾ ಜಾಗಗಳನ್ನು ಗುರುತಿಸಿ ಧರ್ಮ ಶಾಲೆಗಳನ್ನು ಕಟ್ಟಿಸಿಕೊಡಿ

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಂಥಾ ಕೆಲಸ ಮಾಡಿದರೆ ಯಾರೂ ಬೇಡ ಅನ್ನುವುದಿಲ್ಲ. ಈಗ ತಿರುಪತಿಯಲ್ಲಿ ನಮ್ಮ ದುಡ್ಡು ಖರ್ಚು ಮಾಡಿದ್ದೀರಿ. ಅದು ಎಲ್ಲರಿಗೂ ಅನುಕೂಲವಾಗುತ್ತದೆ. ನಮ್ಮ ಕಲ್‌ಬುರ್ಗಿ ಜಿಲ್ಲೆ ತೆಗೆದುಕೊಂಡರೆ ಅಲ್ಲಿಗೆ ಏನೂ ದುಡ್ಡು ಖರ್ಚು ಮಾಡಿಲ್ಲ. ದೀಪದ ಕೆಳಗೆ ಕತ್ತಲು ಅಂದ ಹಾಗೆ ಇಡೀ ದೇಶದಲ್ಲಿ ನಿಮ್ಮ ದುಡ್ಡು ಓಡಾಡುತ್ತವೆ ಅಂತ ಹೇಳುತ್ತೀರೇ ವಿನಃ ನಮ್ಮ ರಾಜ್ಯದಲ್ಲಿರುವ ಹಳ್ಳಿಗಳಲ್ಲಿ ಈ ಬಗ್ಗೆ ದುಡ್ಡು ಖರ್ಚು ಮಾಡುವುದಕ್ಕೆ ನಿಮ್ಮ ಗಮನ ಇಲ್ಲ ಎಂದು ಹೇಳಬೇಕಾಗಿದೆ.

ಇನ್ನು ಮುಜರಾಯಿಗೆ ಸೇರಿದ ಹಾಗೆ ನಮ್ಮ ರಾಜ್ಯದಲ್ಲಿ ಎರಡು ಸಂಸ್ಕೃತ ಕಾಲೇಜುಗಳು ಇವೆ ಒಂದು ವಂಹಾರಾಜ ಸಂಸ್ಕೃತ ಕಾಲೇಜು ಮತ್ತೊಂದು ಮೇಲುಕೋಟೆ ಸಂಸ್ಕೃತ ಕಾಲೇಜು ಇದು ಏತಕ್ಕೆ ಬೇಕು ? ಇದನ್ನು ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಟ್ರಾನ್ಸ್‌ಫರ್ ಮಾಡಿ. ಈ ಕಾಲೇಜುಗಳು ಇದರಲ್ಲೇ ಏತಕ್ಕೆ ಇರಬೇಕು ? ಈ ಮುಜರಾಯಿಗೆ ಸಂಬಂಧಪಟ್ಟ ಹಾಗೆ ಒಂದು ಕಾಂಪ್ರಹೆನ್ಸಿವ್ ಬಿಲ್ ಅನ್ನು ತೆಗೆದುಕೊಂಡು ಬನ್ನಿ. ನಾನು ಮೊದಲೇ ಹೇಳಿದ ಹಾಗೆ ಯಾವ ದೇವರು ಪವರ್ ಫುಲ್ ಆಗಿದೆಯೋ ಎಲ್ಲಮ್ಮನ ದೇವಸ್ಥಾನ, ಮಾರಮ್ಮನ ದೇವಸ್ಥಾನ ಇಂಥಾದ್ದಕ್ಕೆಲ್ಲಾ ದುಡ್ಡು ಕೊಡುತ್ತೀರಿ. ಇದರ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಬಿಲ್ ಅನ್ನು ತೆಗೆದುಕೊಂಡು ಬಂದು ಎಲ್ಲಾ ದೇವಸ್ಥಾನಗಳಿಗೂ ಸರಿಸಮಾನವಾದ ರೀತಿಯಲ್ಲಿ ಸಹಾಯ ಮಾಡತಕ್ಕಂಥಾ ವ್ಯವಸ್ಥೆ ಮಾಡಿ. ನಾನಂತೂ ನಿಮ್ಮನ್ನು ಇದರ ಬಗ್ಗೆ ಸಹಾಯ ಕೇಳುವುದಕ್ಕೆ ಬರುವುದಿಲ್ಲ. ನನಗೆ ಬೇಕಾಗೂ ಇಲ್ಲ, ನನಗೆ ಅದರಲ್ಲಿ ನಂಬಿಕೆಯೂ ಇಲ್ಲ. ನಾವು ಜನಗಳ ಹತ್ತಿರ ಹೋದಾಗ ನಮಗೇನೇ ವೋಟು ಹಾಕುತ್ತಾರೆ ನನಗೆ ಗೊತ್ತು. ನಾನು ಹೇಳುವುದು ಎಲ್ಲರನ್ನೂ ಸರಿಸಮಾನಾದ ರೀತಿಯಲ್ಲಿ ನೋಡಿ ಎಂದು. ನಾವು ಹೇಳಿದರೂ ಸಹ ತಾವು ಆ ರೀತಿ ನೋಡಬೇಕಲ್ಲ. ಧಾರವಾಡ ಜಿಲ್ಲೆಗೆ ಒಂದು ತರಹ, ಇನ್ನೊಂದು ಜಿಲ್ಲೆಗೆ ಇನ್ನೊಂದು ತರಹ ಈ ತರಹ ಡಿಸ್ಕ್ರಿಮಿನೇಷನ್ ಬೇಡ. ಇದರ ಬಗ್ಗೆ ಜಾಗ್ರತೆಯಾಗಿ ಆದಷ್ಟು ಬೇಗ ಆಕ್ಟ್ ಮಾಡಿ. ಗುಡಿ ರಿಪೇರಿ ಕೆಲಸ ಎಲ್ಲಿ ಅವಶ್ಯ ಇದೆಯೋ ಅಲ್ಲಿ ಮಾಡಿ. ಒಟ್ಟಿನಲ್ಲಿ ಹೇಳುವುದು, ಹೆಚ್ಚಿಗೆ ರಿಪೇರಿ ನಗೈರೆಗೆ ಖರ್ಚು ಮಾಡುವ ಬದಲು ಆ ಊರಿನ ಜನಕ್ಕಳಿಗೆ ಅನುಕೂಲಕ್ಕೆ ಧರ್ಮ ಶಾಲೆಯನ್ನು ಕಟ್ಟಿಸುವ ಹಾಗೆ ಮಾಡಿ, ಎಲ್ಲರಿಗೂ ಅನುಕೂಲವಾಗುತ್ತದೆ ಇದನ್ನು ಕಟ್ಟಿಸುವುದಕ್ಕೆ ಯಾರ ಮುಂಜೂರಾತಿಯೂ ಬೇಕಾಗಿಲ್ಲ. ನಿಮ್ಮ ಡಿಪಾರ್ಟ್‌ಮೆಂಟಿನವರೇ ಮಾಡಬಹುದು.

ಒಬ್ಬ ಸದಸ್ಯರು.—ದಪಾಖಾನೆಯನ್ನೂ ತೆರೆಯಬೇಕಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ದವಾಖಾನೆಯನ್ನೂ ಮಾಡುವುದಕ್ಕೂ ನನ್ನ ಸಮ್ಮತ ಇದೆ ಮಾಡಿ. ನೀವು ಕೇಳಬೇಕಲ್ಲಾ !

ಇನ್ನು ಹೌಸ್‌ರೆಂಟ್ ಕಂಟ್ರೋಲ್ ಆಕ್ಟ್ ಇದರ ಬಗ್ಗೆ ತಾವು ಗಮನಹರಿಸಬೇಕಾಗಿದೆ. ಈ ವಿಚಾರದಲ್ಲಿ ಶ್ರೀಮತಿ ಪ್ರಮೀಳಾ ಅವರ ವರದಿ ಸರ್ಕಾರದಲ್ಲಿದೆ. ಅದರಲ್ಲಿ ಸರ್ಕಾರದವರು ಇದುವರೆಗೆ ಯಾವ್ಯಾವುದನ್ನು ಒಪ್ಪಿಕೊಂಡಿದ್ದಾರೆ, ಅವರ ರೆಕಮೆಂಡೇಷನ್ ಯಾವ್ಯಾವುದು ಆಕ್ಸೆಪ್ಟ್ ಆಗಿದೆ ಇದನ್ನು ಇನ್ನೂ ವರೆಗೂ ಸದನಕ್ಕೆ ತಿಳಿಸಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಆ ಬಿಲ್ ತಯಾರಾಗಿದೆ. ಇದೇ ಸದನದಲ್ಲಿ ಆ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಹೋದ ಸಲವೂ ಕೇಳಿದಾಗ ಇದೇ ಮಾತನ್ನು ಹೇಳಿದಿರಿ. ಆದರೂ ಇದುವರೆಗೂ ಅದು ಬರಲಿಲ್ಲ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅರ್ಬನ್ ಏರಿಯಾದಲ್ಲಿರತಕ್ಕಂಥಾ ಜನ ಹೊಸದಾಗಿ ರೆಂಟ್ ಕಂಟ್ರೋಲ್ ಆಕ್ಟ್ ಬರಾತ್ತದೆ, ಶ್ರೀಮತಿ ಪ್ರಮೀಳಾ ಅವರ ರೆಕಮೆಂಡೇಷನ್ ಯಾವಾಗ ಬರುತ್ತದೆ ಅನ್ನುವುದನ್ನು ಜನರು ಎದುರು ನೋಡುತ್ತಿದ್ದಾರೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಬಹು ಬೇಗನೆ ಇಂಪ್ಲಿಮೆಂಟ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.